
ಚಾವರುಳಿನ 150 ನೇ ಆವೃತ್ತಿ




# ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು

ಸಂತ ಕುರಿಯಾಕೋಸ್ ಏಲಿಯಾಸ್ ಚಾವರ

# ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು

ಸಂತ ಕುರಿಯಾಕೋಸ್ ಏಲಿಯಾಸ್ ಚಾವರ

# ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು

ಸಂತ ಕುರಿಯಾಕೋಸ್ ಏಲಿಯಾಸ್ ಚಾವರ

ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು
ಒರು ನಲ್ಲ ಅಪ್ಪನ್‌ಂಡೆ ಜಾವರುಳ್ (೧೮೬೮)
(ಮಲಯಾಳಂ)

ರಚನೆ: ಸಂತ ಕುರಿಯಾಕೋಸ್ ಎಲಿಯಾಸ್ ಚಾವರ
ಕನ್ನಡ ಅನುವಾದ:  ಥಾಮಸ್ ಅಯಾಂಕುಡಿ ಸಿ.ಎಂ.ಐ

Published by
Chavara Central Secretariat
Chavara Hills, Kochi

150th  Year Revised and Updated Edition 2018

Layout
Carmel Bhavan, Mysuru

©
Chavara Central Secretariat
Chavara Hills, Kakkanad, Post Box3105
Kochi 682 030 Kerala, India

# ಪರಿವಿಡಿ


| | |
|---|---|
| ಸಮರ್ಪಣೆ | ೦೭ |
| ಮುನ್ನುಡಿ | ೦೯ |
| **ಭಾಗ 1 . ಕುಟುಂಬ ವಿಧಿಗಳು** | **೧೧** |
| ಪ್ರೀತಿ | ೧೧ |
| ನಮ್ರತೆ | ೧೪ |
| ಸಂಸರ್ಗ ವಿಶೇಷ | ೧೫ |
| ಉದ್ಯಮ ಶೀಲತೆ | ೧೭ |
| ಪರೋಪಕಾರ ವಾಡಿಕೆ | ೧೯ |
| ನ್ಯಾಯ ನಡವಳಿಕೆ | ೨೧ |
| ದೇವರ ಭಯ | ೨೩ |
| ಸಹನ ಶೀಲತೆ | ೨೪ |
| ಒಳ್ಳೆಯ ಗ್ರಂಥಗಳು | ೨೫ |
| ಬದ್ಧ ದಿನಗಳು | ೨೬ |
| ನಿತ್ಯಕ್ರಮ | ೨೭ |
| | |
| **ಭಾಗ 2. ಮಕ್ಕಳ ಪಾಲನೆ** | ೨೯ |
| ಸಂತ ಕುರಿಯಾಕೋಸ್ ಏಲಿಯಾಸ್ | |
| ಚಾವರರವರ ಒಂದು ಸಂಕ್ಷಿಪ್ತ ಚರಿತ್ರೆ. | ೩೭ |
| ಕುಟುಂಬಗಳಿಗಾಗಿ ಮಧ್ಯಸ್ಥ ಪ್ರಾರ್ಥನೆ | ೪೧ |
| ಸಂತ ಚಾವರ – | |
| ಜೀವನದ ಮೈಲಿಗಲ್ಲುಗಳು | ೪೩ |

## ಸಮರ್ಪಣೆ

ಆತ್ಮೀಯರೇ,

ರಕ್ತ ಸಂಬಂಧವಾಗಿ ನೋಡಿದರೆ, ನಾನು ಚೆನ್ನಂಗರಿ ಧರ್ಮಕೇಂದ್ರದ ಕುರಿಯಾಕೋಸ್ ಚಾವರ ಅವರ ಪುತ್ರ. ಸರ್ವಶಕ್ತ ದೇವರು ತಮ್ಮ ಅಪಾರ ಕರುಣೆಯಿಂದ ನಾನು ಈ ಲೋಕಕ್ಕೆ ಬರಲು ಇಚ್ಛಿಸಿದರು. ನಾನು ಈ ಕುಟುಂಬದಲ್ಲಿ ಜನಿಸಿದ್ದರಿಂದ ನ್ಯಾಯಯುಕ್ತವಾಗಿ ನೋಡಿದರೆ ನಿಮಗೆ ಏನಾದರೂ ಒಳಿತನ್ನು ಮಾಡುವ ಜವಾಬ್ದಾರಿ ನನ್ನದಾಗಿದೆ. ಈ ರೀತಿ ನೋಡುವಾಗ ಬರೀ ಸಣ್ಣ ಪುಟ್ಟ ಕೆಲಸಗಳಲ್ಲದೆ ಗಮನಾರ್ಹವಾದದ್ದೇನನ್ನು ನಿಮಗಾಗಿ ನಾನು ಮಾಡಿಲ್ಲ. ಆದ್ದರಿಂದ ನನ್ನ ಸ್ವಂತ ಹಸ್ತಾಕ್ಷರದಲ್ಲಿ ಇದನ್ನು ನಿಮಗೆ ನೀಡುತ್ತಿದ್ದೇನೆ. ನಾನು ಮರಣಹೊಂದಿದರೂ ಈ ಹಸ್ತಾಕ್ಷರದ ಪ್ರತಿ ಮರಣಹೊಂದಿವುದಿಲ್ಲ. ಆದ್ದರಿಂದ ಇದನ್ನು ನನ್ನ ಅಮೂಲ್ಯ ನಿಕ್ಷೇಪವಾಗಿ ಕಾಪಾಡಿಕೊಳ್ಳುವಂತೆ ನನ್ನ ಮಕ್ಕಳಾದ ಕೈನಗರಿ ಚರ್ಚಿನ ಮಕ್ಕಳಾದ ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ನನ್ನ ಒಡಹುಟ್ಟಿದವರೂ ಮನೆಯವರೂ ಆತ್ಮ ಮತ್ತು ಮಾಂಸ ಸಂಬಂಧದಲ್ಲಿನ ಮಕ್ಕಳೂ ಆದ ನಿಮಗೆ ಇದು ನನ್ನ ಮರಣಶಾಸನವಾಗಿದೆ. ಆದ್ದರಿಂದ ನೀವು ನನ್ನ ವಾರಸುದಾರರಾಗಿದ್ದೀರೆಂದು ತೋರಿಸುವ ಚಿಹ್ನೆಯಾಗಿರಲಿ ಇದು. ನಿಮಗೆ ದೇವರು ನೀಡಿದ, ಈಗಲೂ ನೀಡುತ್ತಿರುವ ಅಗಣಿತ ಅನುಗ್ರಹಗಳು ನಿಮ್ಮ ಪ್ರಶಂಸಾರ್ಹ ಜೀವನದಿಂದ ಮಾತ್ರವಲ್ಲ, ನಿಮ್ಮ ಪೂರ್ವಜರ ನಿಜಾವಾದ ಪ್ರೀತಿ ಭರವ–

ಸೆಗಳು ಇದಕ್ಕೆ ಕಾರಣವಾಗಿದೆ. ಇದು ನಷ್ಟವಾಗದಿರಲು ನೀವು ಜಾಗರೂಕತೆ ವಹಿಸಬೇಕು. ನಾನು ಈ ಭೂಮಿಯಲ್ಲಿ ಜನಿಸಿ ನಿಮಗೆ ಇದನ್ನು ನೀಡಿದ್ದೇನೆ ಎಂದು ಖಚಿತ ಪಡಿಸಲು ಸಾಧ್ಯವಾದಷ್ಟು ಇದರ ಪ್ರತಿಗಳನ್ನು ಮಾಡಿ ನಿಮ್ಮ ನಿಮ್ಮ ಮನೆಗಳಲ್ಲಿ ಜೋಪಾನವಾಗಿಟ್ಟು ಇದನ್ನು ಪ್ರಸಾರಮಾಡಬೇಕು. ಇದರ ಮೂಲಪ್ರತಿಯನ್ನು ಬಿಗಿಯಾಗಿ ಒಂದು ಪೆಟ್ಟಿಗೆಯಲ್ಲಿಟ್ಟು ಈ ದೇವಾಲಯದಲ್ಲೇ ಅದನ್ನು ಕಾಪಾಡಬೇಕು. ಪ್ರತಿ ತಿಂಗಳು ಮೊದಲನೆಯ ಶನಿವಾರ ಎಲ್ಲರೂ ಸೇರಿ ಇದನ್ನು ಓದಬೇಕು. ಇದು ನನ್ನ ಮರಣ ವರ್ಷದ ಸ್ಮರಣೆ. ನನ್ನನ್ನು ಸ್ಮರಿಸಲು ನೀವು ಬೇರೇನನ್ನು ಮಾಡಬೇಡಿ ಪ್ರತಿ ತಿಂಗಳು ಇದನ್ನು ಓದಿದ ನಂತರ: "ಕರ್ತರೇ ನೀತಿವಂತರ ಭವನದಲ್ಲಿ ಈ ನಿನ್ನ ಸೇವಕನ ಆತ್ಮವನ್ನು ಸ್ವೀಕರಿಸಿರಿ" ಎಂದು ನನಗಾಗಿ ಪ್ರಾರ್ಥನೆ ಮಾಡಬೇಕೆಂದು ನಿಮ್ಮೊಡನೆ ಕೇಳಿಕೊಳ್ಳುತ್ತಿದ್ದೇನೆ.

# ಮುನ್ನುಡಿ

ಒಂದು ಕ್ರೈಸ್ತ ಕುಟುಂಬ ಸ್ವರ್ಗ ಲೋಕದ ಪ್ರತಿಬಿಂಬವಾಗಿದೆ. ಒಂದು ಕುಟುಂಬದ ಅಸ್ತಿತ್ವದ ಉದ್ದೇಶವೇನೆಂದರೆ, ರಕ್ತ ಮತ್ತು ಪ್ರೀತಿಯ ಬಂಧುತ್ವದಲ್ಲಿ ಒಂದು ಕುಟುಂಬದ ಸದಸ್ಯರು ಒಂದಾಗಿ ಬಾಳುವುದು; ಮಕ್ಕಳು ಹಿರಿಯರಿಗೆ ಗೌರವ ಮತ್ತು ವಿಧೇಯತೆ ತೋರಿಸುವುದು; ದೇವರೊಡನೆ ಹಾಗೂ ತಮ್ಮ ಸಂಗಾತಿಗಳೊಡನೆ ಶಾಂತಿ ಸಮಾಧಾನದಲ್ಲಿ ಜೀವಿಸುವುದು; ಅವರವರ  ಜೀವನ ಸ್ಥಿತಿಗೆ ಅನುಸಾರವಾಗಿ ಮುಕ್ತಿಯನ್ನು ಪಡೆಯಲು ಪ್ರಯತ್ನಿಸುವುದು. ಈ ಲೋಕದಲ್ಲಿ ಪ್ರತಿಯೊಂದು ದುಃಖ ಸಂಕಟಗಳ ನಿಮಿಷಗಳಲ್ಲಿ  ಸಿಹಿ ಸ್ಮರಣೆ ತರುವ ನೆಮ್ಮದಿ ಮತ್ತು ಸಮಾಧಾನ ದೊರಕುವುದು ಪ್ರೀತಿ ಮತ್ತು ಕ್ರಮಬದ್ಧವಾದ ಕುಟುಂಬಗಳಲ್ಲಿ ಜೀವಿಸುವುದರಿಂದ ಮಾತ್ರ.

ಹಾಗೆಯೇ ಶಾಂತಿ ಮತ್ತು ಶಿಸ್ತು ಇಲ್ಲದೆ ದೇವರ ಶುಶ್ರೂಷೆ ಹಾಗೂ ಮುಕ್ತಿ ಪಥದ ಬಗ್ಗೆ ಯಾವುದೇ ಕಾಳಜಿ ವಹಿಸದೆ ಬಾಳುವ ಒಂದು ಕುಟುಂಬದಲ್ಲಿ ಜೀವನ ನಡೆಸುವುದು ಅತ್ಯಂತ ಸಂಕಟಕರವಾದ ಕೆಲಸ. ಈ  ರೀತಿಯ ಶಿಸ್ತಿಲ್ಲದ ಕುಟುಂಬಗಳಲ್ಲಿ ಉಳಿಯುವುದು ಬರೀ ನಿರಾಸೆ ಮತ್ತು ಕಣ್ಣೀರು. ಈ ನಿಮಿತ್ತವಾಗಿ ಅನೇಕ ಪ್ರಖ್ಯಾತ,  ಗೌರವಾನ್ವಿತ ಹಾಗೂ ಶ್ರೀಮಂತ ಕುಟುಂಬಗಳು ನಿರ್ನಾಮವಾಗಿದೆ. ಇದ–ರಿಂದಾಗಿ ಎಷ್ಟೇ ಜಗಳಗಳು, ಪಾಪಗಳು, ವಿನಾಶಗಳು ಹಾಗೂ ಅನಿಷ್ಟಗಳು ಬರಬಾರದೆಂಬುದೇ ನನ್ನ ಆಸೆ. ಇದಕ್ಕಾಗಿ ಬೇಕಾದ ದೈವೀಕ ಪ್ರೇರಣೆಯನ್ನೂ ಧೃಡತೆಯನ್ನೂ ಬೇಡಿಕೊಂಡು

ಈ ಕುಟುಂಬ ವಿಧಿಗಳನ್ನು ಬರೆದಿದ್ದೇನೆ. ಇವುಗಳನ್ನು ನಿಮ್ಮ ಪೂರ್ವಜರ ಬಾಯಿಂದ ಹೊರಹೊಮ್ಮುವ ಉಪದೇಶದಂತೆ ಸ್ವೀಕರಿಸಿ, ತುಂಬು ಹೃದಯದಿಂದ ಅನುಸರಿಸಿ, ಇತರರೂ ಅನುಸರಿಸುವಂತೆ ಮಾಡಬೇಕೆಂದು ನಿಮ್ಮಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

# ಭಾಗ -1
## ಕುಟುಂಬ ವಿಧಿಗಳು

**ಪ್ರೀತಿ**

೧. ನೀವು ಪರಸ್ಪರ ದಾನಶೀಲರೂ, ಪ್ರೀತಿವಂತರೂ ಆಗಿರಿ. ಪ್ರತಿಯೊಬ್ಬರ ಕುಂದು ಕೊರತೆಗಳನ್ನು ನೀವು ಕ್ಷಮಿಸಿರಿ. ಈ ರೀತಿ ನೀವು ಮಾಡಿದರೆ ಈ ಲೋಕದಲ್ಲಿ ಶಾಂತಿಯೂ ಪರಲೋಕದಲ್ಲಿ ನಿತ್ಯ ಸೌಭಾಗ್ಯವೂ ನಿಮ್ಮದಾಗಿರುತ್ತದೆ. ಒಂದೇ ಕುಟುಂಬದಲ್ಲಿನ ಅಣ್ಣತಮ್ಮಂದಿರು ಅಕ್ಕ ತಂಗಿಯರು ಪರಸ್ಪರ ಪ್ರೀತಿಸದೆ ವೈರ ಮನೋಭಾವದಿಂದ ವಾಗ್ವಾದಮಾಡುವುದು ಶೋಚನೀಯವಾದ ಸಂಗತಿ. ವಿಭಾಗಿಸಲ್ಪಟ್ಟ ರಾಜ್ಯಕ್ಕೆ ಉಳಿಗಾಲವಿಲ್ಲವೆಂದು ನಮ್ಮ ಕರ್ತರು ನುಡಿದಿದ್ದಾರೆ. ಹಾಗೆಯೇ ವಿಂಗಡಿಸಲ್ಪಟ್ಟ ಕುಟುಂಬಗಳು ಬೇಗನೆ ನಾಶಹೊಂದುವುದು ಖಚಿತ. ಕುಟುಂಬದೊಳಗಿನ ಕುಂದುಕೊರತೆಗಳನ್ನು, ನ್ಯೂನತೆಗಳನ್ನು ನೀವು ಪರಸ್ಪರ ಕ್ಷಮಿಸಿದರೆ ಹೊರಗಡೆಯವರು ನಿಮ್ಮನ್ನು ಕ್ಷಮಿಸುತ್ತಾರೆಯೇ? ನಾಳೆ ಬೇರೆಯವರು ನಿನ್ನ ಕೊರತೆಗಳನ್ನು ಕ್ಷಮಿಸಬೇಕಾದರೆ ಇಂದು ನಿಮ್ಮವರ ಕುಂದುಕೊರತೆಗಳನ್ನು ನೀನು ಕ್ಷಮಿಸಬೇಕಲ್ಲವೇ? ನಿನಗೆ ಯಾವ ತೊಂದರೆಗಳನ್ನೂ ಮಾಡದವರನ್ನು ಮಾತ್ರ ನೀನು ಪ್ರೀತಿಸಿದರೆ ಅದರ್ಮಿಗಳೂ ಪರಸ್ಪರ ಅರಿವು ಪರಿಚಯವೂ ಇಲ್ಲದವರೂ ಮಾಡುವುದಕ್ಕಿಂತ ಹೆಚ್ಚಾಗಿ ನೀನು ಮಾಡಿದ್ದೇನು? ಆದಾಮ್ ಎಂಬ ಆದಿಪಿತ ನಮಗೆ ಆಸ್ತಿಯಾಗಿ ಕೊಟ್ಟ ದುಃಖಗಳೂ ಸಂಕಟಗಳೂ ಸಾಕಷ್ಟು ಇರಬೇಕಾದರೆ ನಾವೇ ಸ್ವತಃ ಇನ್ನಷ್ಟು ಸೃಷ್ಟಿಮಾಡಬೇಕೆ? ಈ ರೀತಿಯ ಕ್ಷುಲಕ ಜಗಳಗಳ ಕಾರಣಭೂತರಾದವರಿಗೆ ವಿಪತ್ತು.

ಒಮ್ಮೆ ಒಬ್ಬಾಕೆ ಮುದುಕಿ ತನ್ನ ಮನೆಯಲ್ಲಿ ಜಗಳಮಾಡಲು ಆನೇಕ ಕಾರಣಗಳನ್ನು ಕಂಡು ಹಿಡಿದಾಗ ಸೈತಾನನು ಆಕೆಗೆ ಪ್ರತ್ಯಕ್ಷನಾಗಿ ಒಂದು ಚೀಲತುಂಬ ಚಿನ್ನ ನೀಡಿ ನಾನು ಮೂರು ವರ್ಷಗಳ ಕಾಲ ಪ್ರಯತ್ನಿಸಿ ವಿಫಲನಾದ ಕಾರ್ಯವನ್ನು ನೀನು ಬರೀ ಮೂರುದಿನಗಳಲ್ಲಿ ಸಾಧನೆ ಮಾಡಿದೆ. ಆದ್ದರಿಂದ ನೀನು ನನ್ನ ಸಲಹೆಗಾರಳಾಗಲು ಎಲ್ಲಾ ಯೋಗ್ಯತೆಯು ಇರುವವಳು ಎಂದು ಹೇಳಿ ಅವಳನ್ನು ಹಿಡಿದು ನರಕಕ್ಕೆ ಕೊಂಡೊಯ್ದನಂತೆ.

ಒಂದು ಕುಟುಂಬದ ಗೌರವ ಮತ್ತು ಭಾಗ್ಯವೆಂದರೆ ಯಾವುದೇ ಜಗಳಗಳಿಲ್ಲದೆ ಎಲ್ಲರ ಜೊತೆ ಶಾಂತಿಯಿಂದಿರುವುದು. ಶತ್ರುಗಳಿಗೆ ಪ್ರತಿಕಾರ ಮಾಡಲು ಮೃಗಗಳಿಗೂ ಶಕ್ತಿಯಿದೆ. ಆದರೆ ಅವುಗಳನ್ನು ಲಕ್ಷಿಸದೆ ಕ್ಷಮಿಸಲು ನಿಜವಾದ ಬಲಿಷ್ಠರಾದವರಿಗೆ, ವಿವೇಕವುಳ್ಳವರಿಗೆ ಮತ್ತು ಮಾನಯೋಗ್ಯರಾದವರಿಗೆ ಮಾತ್ರ ಸಾಧ್ಯ.

ಒಂದು ದೃಷ್ಟಾಂತ: ಒಮ್ಮೆ ಕಾನ್‌ಸ್ಟಂಟೈನ್ ಎಂಬ ಮಹಾ ಚಕ್ರವರ್ತಿಯು ತನ್ನ ರಾಜ ಸಮೂಹದ ಮಧ್ಯೆ ನಡೆಯುತ್ತಿರಬೇಕಾದರೆ ದಾರಿಯಲ್ಲಿ ಒಬ್ಬಾತನು ಆತನ ಕೆನ್ನೆಗೊಡೆದ. ಆಗ ಜನ ಸ್ತೋಮವೆಲ್ಲ ಪ್ರತಿಕಾರ ಮಾಡಲು ಮತ್ತು ಆ ದುಷ್ಟನನ್ನು ಕೊಲ್ಲಲು ಚಕ್ರವರ್ತಿಗೆ ಉಪದೇಶ ನೀಡಿದರು. ಇದಕ್ಕೆ ಮಹಾ ಚಕ್ರವರ್ತಿ ಪ್ರತ್ಯುತ್ತರ್ನಿಸಿದ್ದು ಹೀಗೆ: ನನ್ನ ಅತಿ ಕೆಳಮಟ್ಟದ ಅಧಿಕಾರಿಗೂ ಕೂಡಾ ಸಾಧ್ಯವಾದದ್ದನ್ನು ನಾನು ಮಾಡಿದರೆ ಅದೊಂದು ದೊಡ್ಡ ಕಾರ್ಯವೇನು? ಆದರೆ

ಈತನನ್ನು ನಾನು ಕ್ಷಮಿಸುತ್ತಿದ್ದೇನೆ. ಈ ನನ್ನ ವರ್ತನೆ ನನ್ನ ಅತಿದೊಡ್ಡ ಶಕ್ತಿಯ ಸಂಕೇತವಾಗಿರುತ್ತದೆ.

೨. ಕೋರ್ಟನಲ್ಲಿ ಪಿರ್ಯಾದಿ ಸಲ್ಲಿಸುವುದು ಕುಟುಂಬಗಳನ್ನು ನಾಶ ಮಾಡುತ್ತವೆ. ಎಷ್ಟೇ ನ್ಯಾಯಾಯುಕ್ತಕ್ರಮವಾದ ವಿಷಯವಾದರೂ ಕೋರ್ಟನಲ್ಲಿ ಪಿರ್ಯಾದಿ ಸಲ್ಲಿಸದಿದ್ದುದು ಉತ್ತಮವಾಯಿತ್ತೆಂದು ಕೊನೆಗೆ ಮನವರಿಕೆಯಾಗುತ್ತದೆ. ಕೋರ್ಟಗೆ ಹೋದದ್ದರಿಂದ ಯಾರಿಗೂ ಯಾವ ರೀತಿಯ ಉಪಕಾರವೂ ಸಂತೋಷವೂ ಉಂಟಾಗಿಲ್ಲ.

೩. ಭಾನುವಾರ ಇತ್ಯಾದಿ ಬದ್ಧದಿನಗಳಲ್ಲಿ ತಿಥಿ ಮೊದಲಾದ ಕುಟುಂಬ ಆಚರಣೆಗಳನ್ನು ನಡೆಸುವುದು ಅನೇಕ ಕೆಡುಕುಗಳಿಗೂ ಆತ್ಮನಾಶಕ್ಕೂ ಕಾರಣವಾಗುವ ರೂಢಿಯಾಗಿದೆ. ಭಾನುವಾರ ಕರ್ತರ ದಿನವಾಗಿದೆ. ಈ ರೀತಿಯ ಆಚರಣೆಗಳು ಕರ್ತರ ದಿನವನ್ನು ಸೈತಾನನ ದಿನವಾಗಿಸಲು ಕಂಡುಹಿಡಿದ ಒಂದು ಉಪಾಯವಾಗಿದೆ. ಮನೆಯಲ್ಲಿ ಯಾರಾದರೂ ತೀರಿಕೊಂಡರೆ ಮನೆಯ ಉಳಿದ ಸದಸ್ಯರು ಸ್ವಂತ ಅತ್ಮೀಯ ವಿಷಯಗಳನ್ನು ಬದಿಗೊತ್ತಿ ಬದ್ಧದಿನಗಳಲ್ಲಿ ದೇವಾಲಯಕ್ಕೆ ಹೋಗದಿರುವುದು ದೇವರಿಂದ ಹಾಗೂ ಪವಿತ್ರ ಧರ್ಮಸಭೆಯಿಂದ ನೀಷೇಧಿಸಲಾದ ವಾಡಿಕೆಯಾಗಿದೆ.

೪. ಅತಿರೇಕದ ಅಗತ್ಯಗಳಿಲ್ಲದಿದ್ದರೆ ಹಣವನ್ನು ಸಾಲವಾಗಿ ಪಡೆದುಕೊಳ್ಳಬೇಡಿ, ಮುಂಚೆಯೇ ತೆಗೆದುಕೊಂಡ ಸಾಲವನ್ನು ಆದಷ್ಟು ಬೇಗನೆ ತಿರುಗಿ ಪಾವತಿ ಮಾಡಲು ಪ್ರಯತ್ನಿಸಿ.

ಪರಸ್ಪರ ಪ್ರೀತಿಯಿಲ್ಲದೆ ಇತರರಿಗೆ ಸಾಲ ಕೊಡಬೇಡಿ. ಸಾಲವಿಲ್ಲದ ಕುಟುಂಬವೇ ಸಂಪನ್ನ ಕುಟುಂಬ. ಆದರೆ ನಿಮ್ಮ ಪೂರ್ವಜರಿಗೆ ಯಾವುದಾದರೂ ಬಲಿಪೂಜೆಯ ಋಣ ಹಾಗೂ ಧರ್ಮವಿಚಾರಣೆಯ ಋಣಗಳು ಇದ್ದರೆ ಅವುಗಳನ್ನು ಬಹುಬೇಗನೆ ತೀರಿಸಿರಿ. ಇದು ಒಂದು ಆಪತ್ತಿನ ವಿಷಯವಾಗಿದೆ. ಯಾಕೆಂದರೆ ಒಂದು ಕುಟುಂಬಕ್ಕೆ ಅನೇಕ ವೇಳೆ ದೈವಶಾಪ ಬಂದೊದಗುವುದು ತೀರಿಸದ ಸಾಲದಿಂದ.

**ನಮ್ರತೆ**

೫. ನೀನು ಒಬ್ಬ ಶ್ರೀಮಂತ ಎಂಬ ಅಂತಸ್ತನ್ನು ಯಾವತ್ತೂ ತೋರಿಸಬೇಡ. ತನಗೆ ಇರುವುದನ್ನೆಲ್ಲಾ ಪ್ರದರ್ಶನ ಮಾಡುವವನು ಕೀಳು ದರ್ಜೆಯ ವ್ಯಕ್ತಿ. ತಾನು ಶ್ರೀಮಂತ ಎಂದು ನಟಿಸುವವನು ಬಹುಬೇಗ ಭಿಕ್ಷುಕನಾಗುತ್ತಾನೆ. ಈ ಲೋಕದಲ್ಲಿ ಇದಕ್ಕೆ ಅನೇಕ ಉದಾಹರಣೆಗಳಿವೆ. ಒಮ್ಮೆ ರಾಜ ದಾವೀದನು ತನ್ನ ಶಕ್ತಿ ಮತ್ತು ಹಿರಿಮೆಯಲ್ಲಿ ಅಹಂಕರಿಸಿ ತನ್ನ ಕೆಳಗಿರುವ ಆಳುಗಳನ್ನು ಎಣಿಸಲು ಆಜ್ಞೆ ಹೊರಡಿಸಿದ. ಇದ–ರಿಂದ ದೈವ ಶಾಪವಾಗಿ ಎಲ್ಲೆಡೆಯು ಸಾಂಕ್ರಾಮಿಕ ರೋಗ ಹರಡಿತು.( ಸ್ಯಾಮುವೆಲ್ ೨೪).

೬. ಪ್ರತಿಯೊಂದು ಪುಣ್ಯದಿನಗಳನ್ನು ಆಚರಿಸುವಾಗಲೂ ಸ್ವಂತ ದ್ರವ್ಯಾನುಕೂಲತೆಗಿಂತ ಹೆಚ್ಚು ಖರ್ಚುಮಾಡಬೇಡಿ. ಯಾಕೆಂದರೆ ಎಲ್ಲಾ ಸಂದರ್ಭಗಳಲ್ಲಿಯೂ ಈ ರೀತಿ ಖರ್ಚು ಮಾಡಲು ನಿನಗೆ ಸಾಧ್ಯವಾಗದಿರಬಹುದು. ಅತಿದೊಡ್ಡ ಪ್ರಕಾಶ ತೋರಿಸಿ ತಕ್ಷಣವೇ ಆರಿಹೋಗುವ ಹುಲ್ಲುಮೆದೆಗಿಂತ ಶಾಶ್ವತವಾಗಿ

ಬೆಳಕು ನೀಡುವ ಒಂದು ಸಣ್ಣ ದೀಪವೇ ಮೇಲು. ಒಮ್ಮೆ ಪ್ರಸಿದ್ಧ ತತ್ವ ಶಾಸ್ತ್ರಜ್ಞನಾದ ಡೊಮೋಕ್ರೀಟಿಸ್ ಅವರನ್ನು ಮನುಷ್ಯರಲ್ಲಿ ಅತ್ಯುತ್ತಮರಾದವರು ಯಾರು ಎಂದು ಕೇಳಿದಾಗ ಉತ್ತರ ನೀಡಿದರಂತೆ. ಸಹೋದರ, ನೀನು ಹಗಲುಹೊತ್ತು ನಿನ್ನನ್ನೇ ಬೆಳಗಿಸಿ ಮುಗಿಸಿ ಬಿಡದಿದ್ದರೆ ರಾತ್ರಿಹೊತ್ತು ಬೆಳಗಲು ಇನ್ನೂ ನಿನ್ನಲ್ಲಿ ಬೆಳಕು ಬಾಕಿಯಿರುತ್ತದೆ. "ತನ್ನನ್ನು ತಾನೆ ಅತಿ ಕಡಿಮೆ ಪ್ರದರ್ಶನ ಮಾಡುವ ವ್ಯಕ್ತಿಯೇ ಅತ್ಯುತ್ತಮರಾದವರು."

**ಸಂಸರ್ಗ ವಿಶೇಷ**

೭. ಮನೆ ಮನೆಗೆ ಹೋಗಿ ಇತರರ ವಿಶೇಷಗಳನ್ನು ವಿಚಾರಿಸುವುದು ಬೇಡ. ಯಾಕೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ವಿಷಯಗಳನ್ನು ಕ್ರಮಬದ್ಧವಾಗಿ ಪರಿಹರಿಸಿಕೊಂಡು ಹೋದರೆ ಇತರರ ವಿಷಯಗಳಲ್ಲಿ ತಲೆಹಾಕಲು ಸಮಯ ಸಿಗುವುದಿಲ್ಲ. ಕ್ರಮಬದ್ದತೆ ಹಾಗೂ ದೇವರ ಭಯ ಇವೆರಡೂ ಇಲ್ಲದ ಕುಟುಂಬಗಳ ಜೊತೆ ಸಂಪರ್ಕ ಮಾಡಬೇಡಿ. ಯಾಕೆಂದರೆ ಒಂದು ಕುಟುಂಬದಲ್ಲಿ ಶಾಂತಿ ಮತ್ತು ಒಳಿತನ್ನು ತರುವುದು ಶ್ರೀಮಂತರಾದ ಬಂಧುಗಳಲ್ಲ; ಕ್ರಮಬದ್ಧತೆ ಹಾಗೂ ದೇವರ ಭಯವಿರುವ ಬಂಧುಗಳು. ಎಷ್ಟೋ ಕುಟುಂಬಗಳು ಶ್ರೀಮಂತರಾದ ಬಂಧುಗಳಿಂದ ಕಣ್ಣೀರು ಸುರಿಸಿ ನಾಶ ಹೊಂದಿದ್ದುಂಟು.

ಫ್ರಾನ್ಸ್ ದೇಶದಲ್ಲಿ ಒಬ್ಬಾತ ತಂದೆಗೆ ಒಬ್ಬನೇ ಮಗ. ಆತನು ತನ್ನ ಮಗನಿಗಾಗಿ ತನ್ನ ಅಂತಸ್ತಿಗೂ ಮೀರಿ , ಕುಲೀನ ಕುಟುಂಬದ ಅತಿ ಶ್ರೀಮಂತಳಾದ ಒಬ್ಬ ಹುಡುಗಿಯನ್ನು ಮದುವೆ

ಮಾಡಿಸಲು ತುಂಬಾ ಪ್ರಯತ್ನಿಸಿದ. ಕೊನೆಗೆ ತನಗಿರುವ ಎಲ್ಲಾ ಆಸ್ತಿಯನ್ನೂ ಮಗನ ಹೆಸರಿಗೆ ಬರೆದಿಡಬೇಕೆಂಬ ಕರಾರಿಗೆ ಒಪ್ಪಿ ತನ್ನ ಆಸೆಯಂತೆ ಆ ಮದುವೆಯನ್ನು ನಡೆಸಿದನು. ಸ್ವಲ್ಪ ದಿನಗಳ ನಂತರ ಮದುಮಗನೂ ಈತನ ಕೀಳು ಮದುಮಗಳೂ ತಂದೆ ತಾಯಿಯಂದಿರೂ ಸೇರಿ ಇತನ ಕೀಳು ಅವಸ್ಥೆಯ ಬಗ್ಗೆ ನೀರಾಸೆಹೊಂದಿ ಆತನನ್ನು ಮನೆಯಿಂದ ಹೊರಹಾಕಿದರು. ಆತ ಭಿಕ್ಷೆಬೇಡುತ್ತಾ, ತನ್ನ ಮಗನ ಮನೆಯಲ್ಲಿ ದೊಡ್ಡ ಹಬ್ಬಗಳು ಜರುಗುವಾಗ ಬಾಗಿಲ ಬಳಿಬಂದು ಉಳಿದ ಮಿಗುಗಳಿಗಾಗಿ ಬೇಡುವ ಸ್ಥಿತಿಗೆ ಬಂದು ಬಿಟ್ಟನಂತೆ.

೮. ಎಲ್ಲಾ ಬಗೆಯ ಜನರಿಗೆ ನಿನ್ನ ಮನೆಯೊಳಗೆ ಪ್ರವೇಶ ನೀಡಬೇಡ, ಬದಲಾಗಿ ಒಳ್ಳೆಯ ಮರ್ಯಾದಸ್ತರು ಹಾಗೂ ದೇವರ ಭಯವಿರುವವರಿಗೆ ಮಾತ್ರ ಪ್ರವೇಶ ನೀಡು. ನೀನು ಯಾರ ಜೊತೆ ಗೆಳೆತನ ಬೆಳೆಸಿದ್ದೀಯೆಂದು ನನಗೆ ಹೇಳಿದರೆ ನೀನು ಯಾವ ರೀತಿಯ ವ್ಯಕ್ತಿ ಎಂದು ನಾನು ನಿನಗೆ ಹೇಳುತ್ತೇನೆ ಎಂಬುದು ಒಂದು ನಾಣ್ನುಡಿ.

೯. ನಿನ್ನ ಮನೆಯಲ್ಲಿ ಅಶ್ಲೀಲ ಮಾತುಗಳು, ಕ್ರೈಸ್ತರಿಗೆ ಅನುಯೋಜ್ಯವಲ್ಲದ ಸಂಭಾಷಣೆಗಳು, ಗೊಣಗಾಟ, ಇತರರ ಬಗ್ಗೆ ಚಾಡಿ ಹೇಳುವುದು . ಈ ರೀತಿಯ ವರ್ತನೆಗೆ ಆಸ್ಪದವಿಲ್ಲ ಎಂದು ಎಲ್ಲರಿಗೂ ತಿಳಿದಿರಲಿ. ಇತರರ ಕೆಟ್ಟ ವರ್ತನೆಗಳ ಬಗ್ಗೆ ಮತ್ತು ಅವರ ಕುಂದು ಕೊರತೆಗಳ ಬಗ್ಗೆ ನಿನ್ನ ಮನೆಯಲ್ಲಿ ಚರ್ಚೆನಡೆಸಿದರೆ ಆ ಪಾಪಕ್ಕಿರುವ ಶಿಕ್ಷೆ ನಿನ್ನ ಮನೆಗೆ ಬಂದೊದಗುತ್ತದೆ. ಒಬ್ಬಾತ ಇತರರ ಬಗ್ಗೆ ಚಾಡಿ ಹೇಳುತ್ತಾ

ಒಬ್ಬೊಬ್ಬರ ಕುಂದು ಕೊರತೆಗಳ ಬಗ್ಗೆ ಮಾತನಾಡುತ್ತಿದ್ದ. ಆತನು ಕೊನೆಗೆ ಹುಚ್ಚನಾಗಿ ನಡೆಯುತ್ತಾ ತನ್ನ ನಾಲಗೆಯನ್ನೇ ಕಚ್ಚಿ ಗಾಯಮಾಡುತ್ತಾ ಪೂರ್ತಿ ಕೊಳೆತು ಹುಳ ತುಂಬಿ ಹೀನ ಮರಣವನ್ನು ಹೊಂದಿದನಂತೆ.

**ಉದ್ಯಮ ಶೀಲತೆ:**

೧೦. ಯಾವಾಗಲೂ ಹೊಸಹೊಸ ವಸ್ತುಗಳನ್ನು ಕೊಂಡು ಕೊಳ್ಳುವ ಬದಲಾಗಿ ಇರುವ ವಸ್ತುಗಳನ್ನು ಸರಿಯಾಗಿ ಉಪಯೋಗಿಸಲು ಪ್ರಯತ್ನಿಸಿ. ಒಂದು ಕುಟುಂಬದ ಘನತೆ ಇರುವುದು ಅದರಲ್ಲಿರುವ ಅಗಣಿತ ವಸ್ತುಗಳನ್ನನುಸರಿಸಿ ಅಲ್ಲ; ಅದರಲ್ಲಿರುವ ವಸ್ತುಗಳ ಗುಣಮಟ್ಟವನ್ನನ್ನುಸರಿಸಿ. ಒಬ್ಬ ಉದ್ಯಮಶೀಲನಾದ ವ್ಯಕ್ತಿ ತನಗಿದ್ದ ಸ್ವಲ್ಪ ಆಸ್ತಿಯಿಂದ ಸಂತುಷ್ಟ ಜೀವನ ನಡೆಸುತ್ತಿದ್ದ. ಆದರೆ ಹೊಟ್ಟೆಕಿಚ್ಚಿನಿಂದ ಕೆಲವರು ಈತನಿಗೆ ಒಂದು ನಿಧಿ ದೊರೆತ್ತಿದ್ದು, ಅದನ್ನು ಮನೆಯಲ್ಲೇ ಬಚ್ಚಿಟ್ಟುಕೊಂಡಿದಾನೆಂದು ಕೋರ್ಟಿಗೆ ದೂರು ಸಲ್ಲಿಸಿದರು. ಆಗ ರಾಜನು ತನಗಿರುವ ಎಲ್ಲಾ ವಸ್ತುಗಳ ಬಗ್ಗೆ ಮಾಹಿತಿ ನೀಡಬೇಕೆಂದು ಆಜ್ಞೆ ಹೊರಡಿಸಿದ. ಆಗ ಆತನು ತನಗಿರುವ ಮಣ್ಣು ತನ್ನ ಬೇವರು ಸುರಿಸುವುದರಿಂದ ಚಿನ್ನವಾಗಿ ರೂಪಾಂತರಗೊಂಡಿದೆ ಎಂದು ಹೇಳಿ ತನ್ನ ಗೌರವವನ್ನು ಉಳಿಸಿಕೊಂಡು ಬಿಡುಗಡೆಯಾದನಂತೆ.

೧೧. ನಿನ್ನ ಅಂತಸ್ತಿಗೆ ತಕ್ಕ ಕೆಲಸವನ್ನು ನೀನು ಮಾಡುತ್ತಿರು. ಕೆಲಸ ಮಾಡದಿರುವುದು ಒಂದು ಆದರಣೀಯ ವ್ಯಕ್ತಿಯ ಲಕ್ಷಣವಲ್ಲ; ಇದು ಮನೆ, ಬಳಗ, ಮಕ್ಕಳು ಇಲ್ಲದವರ ಜೀವನ

ರೀತಿಯಾಗಿದೆ. ಸೋಮಾರಿತನವೇ ಎಲ್ಲಾ ದುರ್ಗುಣ ತಾಯಿ. ಮಧ್ಯಪಾನದ ಮೂಲಕಾರಣವೂ ಇದಾಗಿದೆ. ಸಮಾಜದ ಮುಂದೆ ಅತೀ ದೂಷಣೀಯವೂ ದೇವರ ಮುಂದೆ ಅತೀ ನಿಕೃಷ್ಟ ಕಾರ್ಯವು ಇದಾಗಿದೆ. ಕಾತೋನ್ ಎಂಬ ರೋಮ್ ನಗರದ ಅಧಿಕಾರಿಯೊಬ್ಬರು ರೋಮ್ ನಗರದಲ್ಲಿ ವಾಸಮಾಡಲು ಇಚ್ಛಿಸುವವರೆಲ್ಲ ತಾವು ಕೆಲಸ ಮಾಡುವವರು ಎಂದು ತೋರಿಸಲು ಜಡ್ಡುಗಟ್ಟಿರುವ ಕೈಗಳನ್ನು ತೋರಿಸಬೇಕೆಂದು ಆಜ್ಞೆ ಹೊರಡಿಸಿದ್ದು ಮಾತ್ರವಲ್ಲದೆ, ಶ್ರೀಮಂತರೂ ಕುಲೀನರೂ ಅವರವರ ಅಂತಸ್ತಿಗೆ ತಕ್ಕಂತೆ ತಮ್ಮ ತಮ್ಮ ಕೆಲಸಕುಪಯೋಗಿಸುವ ಆಯುಧಗಳನ್ನು ಹಿಡಿದಲ್ಲದೆ ಹೊರಗಡೆ ನಡೆಯಬಾರದು ಎಂದೂ ಆಜ್ಞೆ ಹೊರಡಿಸಿದರಂತೆ.

೧೨. ವ್ಯಾಪಾರ ಮಾಡುವುದು ಬರೀ ಆತ್ಮಕ್ಕೆ ಮಾತ್ರವಲ್ಲ ಐಶ್ವರ್ಯದ ಸ್ಥಿರತೆಗೂ ಅಪಾಯಕಾರಿಯಾಗಿದೆ. ಬೇರೆ ಯಾವುದೇ ಉದ್ಯಮದಿಂದ ಜೀವನ ನಡೆಸಲು ಸಾಧ್ಯವಿಲ್ಲದಿದ್ದರೆ ವ್ಯಾಪಾರಮಾಡುವುದನ್ನು ಬೇಡ ಎನ್ನುವುದಿಲ್ಲ. ಆದರೆ ಅತ್ಯಂತ ಜಾಗರೂಕತೆಯಿಂದ ನ್ಯಾಯಯುಕ್ತವಾಗಿ ಅದನ್ನು ಮಾಡಬೇಕು.

ಇಬ್ಬರು ವ್ಯಾಪಾರಸ್ತರು ತುಂಬಾ ಮೋಸ ಹಾಗೂ ಕುತಂತ್ರಗಳನ್ನು ಪ್ರಯೋಗಿಸಿದರೂ ತಮ್ಮ ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದ-ಲಿಲ್ಲ. ಒಂದು ದಿನ ಇಬ್ಬರೂ ಪಾಪ ನಿವೇದನೆ ಮಾಡಲು ಹೋದರು. ತಾವು ಇದುವರೆಗೂ ಮಾಡುತ್ತಿದ್ದ ಮೋಸಗಳನ್ನೆಲ್ಲಾ ಗುರುಗಳಿಗೆ ಹೇಳಿದರು. ಆಗ ಗುರುಗಳು ಅವರಿಗೆ ಇನ್ನು ಮೇಲೆ ಯಾವ ರೀತಿಯ ಮೋಸವನ್ನು ಮಾಡದೆ ಸುಳ್ಳು ಹೇಳದೆ

ಒಳ್ಳೆಯ ಜೀವನ ನಡೆಸಲು ಉಪದೇಶ ನೀಡಿದರು. ಗುರುಗಳು ಹೇಳಿದ ರೀತಿಯಲ್ಲಿ ತಮ್ಮ ಜೀವನ ನಡೆಸಿದಾಗ ಅವರು ಒಂದ–ೀ ಒಂದು ವರ್ಷದೊಳಗೆ ದೇವರ ಸಹಾಯದಿಂದ ಅತಿದೊಡ್ಡ ಶ್ರೀಮಂತರಾಗಿ ಮಾರ್ಪಟ್ಟರಂತೆ.

**ಪರೋಪಕಾರ ವಾಡಿಕೆ**

೧೩. ಇರರರಿಗೆ ಒಳಿತನ್ನು ಮಾಡದ ದಿನವು ನಿನ್ನ ಆಯಸ್ಸಿನ ದಿನಗಳ ಎಣಿಕೆಯಲ್ಲಿ ಸೇರುವುದಿಲ್ಲ. ಎಲ್ಲರೂ ನಿನ್ನನ್ನು ಕಂಡು ಭಯಪಡಬೇಕು ಎಂಬುವುದಕ್ಕಿಂತ ನಿನ್ನನ್ನು ಎಲ್ಲರೂ ಪ್ರೀತಿಸಬೇಕು ಎಂಬ ಬಯಕೆ ನಿನ್ನಲ್ಲಿರಬೇಕು.

ಭಿಕ್ಷುಕರು ನಿನ್ನ ಮನೆಯಿಂದ ಬರಿಗೈಯಲ್ಲಿ ಹೋಗಲು ನೀನು ಅವಕಾಶ ಮಾಡಬೇಡ. ಸಾಧ್ಯವಿರುವಷ್ಟು ದಾನಧರ್ಮ ಮಾಡಲು ಉತ್ಸುಕನಾಗು.

ಮನುಷ್ಯರು ಪರಸ್ಪರ ಒಳಿತನ್ನು ಮಾಡಬೇಕೆಂಬುದು ಸೃಷ್ಟಿಕರ್ತನಿಂದ ನೀಡಲ್ಪಟ್ಟ ಒಂದು ಆಜ್ಞೆಯಾಗಿ ಪರಿಗಣಿಸಿ, ಒಬ್ಬ ಮನುಷ್ಯನು ಪ್ರತಿ ದಿನವೂ ಒಬ್ಬನಿಗಾದರೂ ಒಂದು ಒಳ್ಳೆಯ ಕಾರ್ಯವನ್ನು ಮಾಡುತ್ತಿದ್ದ. ಒಂದು ದಿನ ರಾತ್ರಿ ಆತ ಊಟಕ್ಕೆ ಕುಳಿತಿದ್ದಾಗ ಆ ದಿನ ಯಾರಿಗೂ ಒಂದು ಒಳ್ಳೆಯ ಕಾರ್ಯವನ್ನು ಮಾಡಿಲ್ಲ ಎಂದು ಮನವರಿಕೆಯಾಗಿ ಎದ್ದು ಹೋಗಿ ಮೊದಲು ಅದನ್ನು ಪೂರೈಸಿ ನಂತರವೇ ಬಂದು ಊಟ ಮಾಡಿದನಂತೆ

೧೪. ಪೋಲು ವೆಚ್ಚ ಹಾಗೂ ಜಿಪುಣತನ ಎರಡೂ ಪಾಪಕರವಾದುದು. ಜಿಪುಣನ ವಸ್ತುಗಳನ್ನು ಹುಳು ತಿಂದು ಬಿಡುತ್ತದೆ. ಅಬ್ಬರದ ತೋರಿಕೆಯವನ ಸಂತೋಷ ಹೊಗೆಯಂತೆ ದಾಟಿ ಹೋಗುತ್ತದೆ. ಒಂದು ಊರಲ್ಲಿ ಒಬ್ಬ ವ್ಯಕ್ತಿಯಿದ್ದ. ಆತನು ತನ್ನ ಸಂಪತ್ತಿಗನುಸಾರವಾಗಿ ಜಿಪುಣನಾಗದೆ ಹಣವನ್ನು ಖರ್ಚು ಮಾಡುತ್ತಾ ದಾನಧರ್ಮವನ್ನು ಮಾಡುತ್ತಿದ್ದ. ಕಾಲಕ್ರಮೇಣ ಆತನ ಸಿರಿತನ ಹೆಚ್ಚಿದಾಗ ದಾನಧರ್ಮವನ್ನು ನಿರ್ಲಕ್ಷಿಸಿ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಕೂಡಿಸಲು ಪ್ರಾರಂಭಿಸಿದ. ಹೀಗಿರಲು ಆತನ ಕಾಲಲ್ಲಿ ಅತಿ ದೊಡ್ಡದಾದ ಒಂದು ಗಾಯ ಕಾಣಿಸಿ ಕೊಂಡಿತು.

ಗಾಯ ಕೊಳೆತು ಅದರ ವಾಸನೆ ಹೆಚ್ಚಾದಾಗ ಆತ ಅನೇಕ ವೈದ್ಯರ ಸಹಾಯ ಬೇಡಿದನು: ಚಿಕಿತ್ಸೆಗಾಗಿ ತುಂಬಾ ಹಣವನ್ನು ಖರ್ಚು ಮಾಡಿದನು. ಆಗ ಒಬ್ಬ ದೈವದೂತ ಆತನಿಗೆ ಪ್ರತ್ಯಕ್ಷನಾಗಿ ಹೇಳಿದ:

"ಯಾವುದೇ ಧರ್ಮದಾನಗಳನ್ನು ಮಾಡದೆ ಹಣ ಸಂಪಾದನೆ ಮಾಡುವವರಿಗೆ ಈ ರೀತಿಯಾಗಿ ಹಣ ಖರ್ಚುಮಾಡಲು ಸಂದರ್ಭಗಳು ಬಂದೊದಗುತ್ತದೆ ಎಂದು ನೀನು ಅರಿತುಕೊಳ್ಳಬೇಕು".

೧೫. ನಿನಗೆ ಸ್ನೇಹಿತರಾಗಿ ಅನೇಕರ ಅಗತ್ಯವಿಲ್ಲ. ಸಾವಿರ ಜನರಿಂದ ಒಬ್ಬನನ್ನು ಆಯ್ಕೆಮಾಡು. ನಿಜವಾಗಿ ದೇವರನ್ನು ಪ್ರೀತಿಸದವನು ನಿನ್ನನ್ನು ಪ್ರೀತಿಸುವುದಿಲ್ಲ. ದಾವೀದ ಮತ್ತು

ಜೋನಾಥ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಅವರಿಬ್ಬರೂ ಒಂದೇ ಮನಸುಳ್ಳವರಾಗಿ ನಿಜವಾಗಿಯೂ ಪರಸ್ಪರ ಪ್ರೀತಿಸಿದರು. ಕೊನೆಯವರೆಗೂ ಅವರಿಬ್ಬರು ಪ್ರೀತಿಸಿ ಪರಸ್ಪರ ಸಹಾಯ ಮಾಡಿದರು.ಇವರ ನಡುವಿನ ಪ್ರೀತಿ ಕ್ಷುಲ್ಲಕ ಕಾರಣಗಳಿಂದ ಕುಗ್ಗಿ ಹೋಗದೆ ಯಾವುದೇ ಆಪತ್ಕಾಲದ ಅವಶ್ಯಕತೆಗಳಲ್ಲಿ ವೃದ್ಧಿ ಹೊಂದುತ್ತಾ ಹೋಯಿತು.

## ನ್ಯಾಯ ನಡವಳಿಕೆ

೧೬. ಕಳವಾದ ವಸ್ತುಗಳನ್ನು ಸ್ವಲ್ಪ ಹೊತ್ತಿಗಾದರೂ ನಿನ್ನ ಮನೆಯಲ್ಲಿಟ್ಟುಕೊಳ್ಳಲು ನೀನು ಅನುಮತಿ ನೀಡಬಾರದು. ಕಳವಾದ ವಸ್ತುಗಳಿರುವ ಮನೆ ಸುಟ್ಟು ಬೂದಿಯಾಗುತ್ತದೆ ಎಂದು ಪವಿತ್ರಾತ್ಮರು ಎಚ್ಚರಿಕೆ ನೀಡಿದ್ದಾರೆ. ಅನ್ಯರ ವಸ್ತುಗಳನ್ನು ಅಪಹರಿಸಿದವರ ಜೊತೆ ನೀನು ವ್ಯವಹಾರ ಮಾಡಬೇಡ. ಯಾಕೆಂದರೆ ನಾಳೆ ಅವನು ನಿನ್ನ ವಸ್ತುಗಳನ್ನು ಅಪಹರಿಸಲು ಹಿಂಜರಿಯುವುದಿಲ್ಲ. ಮಾತ್ರವಲ್ಲದೆ ಅವನ ಪಾಪಕೃತ್ಯಗಳಲ್ಲಿ ನೀನೂ ಪಾಲುಗಾರನಾಗುವೆ.

ಒಂದು ಊರಿನಲ್ಲಿ ಬೇರೆಯವರ ವಸ್ತುಗಳನ್ನು ಅನ್ಯಾಯವಾಗಿ ಅಪಹರಿಸಿ ಶ್ರೀಮಂತನಾದ ಒಬ್ಬ ವ್ಯಕ್ತಿಯಿದ್ದ. ಆತ ರೋಗದಿಂದ ನರಳುತ್ತಾ ಸಾವನ್ನಪ್ಪುವ ಸಮಯ ಬಂದಾಗ ತನ್ನ ವಸ್ತುಗಳನ್ನು ಹಂಚಿಕೊಡಲು ಮೃತ್ಯುಪತ್ರ ಬರಹಗಾರನನ್ನು ಕರೆಸಿ ಈ ರೀತಿ ಬರೆಯುವಂತೆ ಹೇಳಿದ: " ನನ್ನ ಆತ್ಮವನ್ನು ಪಿಶಾಚಿಗೆ ಕೊಡುತ್ತೇನೆ". ಇದನ್ನು ಕೇಳಿದ ಮಕ್ಕಳು: " ಅಪ್ಪಾ

ಅಪ್ಪಾ, ಏನು ಮಾತನಾಡುತ್ತಿದ್ದಿಯಾ? ಅಪ್ಪ ಬುದ್ಧಿ ಮಂಕಾಗಿ ಏನನ್ನೋ ಹೇಳುತ್ತಿದ್ದಾನೆ" ಎಂದು ಹೇಳಿದರು. ಆಗ ರೋ–ಗಿಯಾದ ತಂದೆ: " ಇಲ್ಲ ಇಲ್ಲ ನಿಜವಾಗಿ ನನಗೆ ಬುದ್ಧಿ ಕೆಟ್ಟು ಹೋಗಿಲ್ಲ. ತುಂಬಾ ಮನವರಿಕೆಯಿಂದ ಮಾತನಾಡುತ್ತಿದ್ದೇನೆ. ಈ ರೀತಿ ಬರೆಯಿರಿ. ನನ್ನ ಆತ್ಮವನ್ನೂ ಇತರರ ವಸ್ತುಗಳನ್ನು ಅಪಹರಿಸಲು ನನಗೆ ಪ್ರೋತ್ಸಾಹ ನೀಡಿದ ನನ್ನ ಹೆಂಡತಿಯ ಆತ್ಮವನ್ನೂ ಪಿಶಾಚಿಗೆ ಅರ್ಪಿಸುತ್ತೇನೆ. ಯಾಕೆಂದರೆ ನಾನು ನಿಮಗೋಸ್ಕರವಾಗಿ ಇತರರ ವಸ್ತುಗಳನ್ನು ಅಪಹರಿಸಿದ್ದು, ಎಂದು ಹೇಳಿ ನಿರ್ಭಾಗ್ಯನಂತೆ ಕೊನೆಉಸಿರೆಳೆದ.

೧೭. ಕೆಲಸಗಾರರಿಗೆ ನ್ಯಾಯವಾದ ಕೂಲಿ ಕೊಡದಿರುವುದೂ ಮುಂದೂಡುವುದೂ ಸರಿಯಲ್ಲ. ಅವರ ಕಣ್ಣೀರು ನೇರವಾಗಿ ದೇವರ ಬಳಿ ಹೋಗುತ್ತದೆ. ಅವರನ್ನು ನಿಂದಿಸುವುದು ಬೇಡ; ಯಾಕೆಂದರೆ ದೇವರು ಅವರ ಕಣ್ಣೀರು ಕಂಡರೆ ನಿಜವಾಗಿಯೂ ನಿನ್ನ ಮೇಲೆ ಪ್ರತಿಕಾರ ಮಾಡುವರು.

**ಒಂದು ಲುವೈನ್ ಎಂಬ ನಗರದಲ್ಲಿ ನಡೆದ ಒಂದು ಘಟನೆ.** ಆ ನಗರದಲ್ಲಿ ಒಬ್ಬಾತ ಗೃಹಸ್ಥನಿದ್ದನು. ಈತನ ಒಂದು ಗುಡಿಸಲಲ್ಲಿ ಒಬ್ಬ ವಿಧವೆ ಮತ್ತು ಆಕೆಯ ಮೂರು ನಾಲ್ಕು ಮಕ್ಕಳೂ ವಾಸವಾಗಿದ್ದರು. ಈ ಗೃಹಸ್ಥ ಅವರಿಗೆ ಅನೇಕ ಬಗೆಯಲ್ಲಿ ಕಿರುಕುಳ ಕೊಟ್ಟು ಸಂಕಟಕ್ಕೀಡು ಮಾಡಬೇಕಾದರೆ ಒಂದು ದಿನ ಆಕೆ ಮೊಣಕಾಲೂರಿ " ಕರ್ತರೆ ಈ ಸಂಕಟಗಳಿಂದ ಮತ್ತು ಅನ್ಯಾಯಗಳಿಂದ ನಮ್ಮನ್ನು ರಕ್ಷಿಸಿರಿ" ಎಂದು ಬೇಡಿದರು. ತಕ್ಷಣವೇ ಆ ಶ್ರೀಮಂತ ನಿಂತಲ್ಲಿಯೇ ಕುಸಿದುಬಿದ್ದು ತೀರಿಕೊಂಡನಂತೆ.

## ದೇವರ ಭಯ

೧೮. ದೇವರ ಭಯ ಮತ್ತು ದೈವ ಭಕ್ತಿ ಇವೆರಡೇ ಒಂದು ಕುಟುಂಬದ ಮುಖ್ಯ ಸಂಪತ್ತು. ದೇವರ ಭಯವಿರುವ ಕುಟುಂಬ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ದೇವರ ಕೃಪೆಯ ಫಲವನ್ನು ಅನುಭವಿಸುತ್ತಾರೆ. ದೇವನಿಂದೆ ಮತ್ತು ಹೀನವಾದ ಸಂಭಾಷಣೆಗಳು ಕಪ್ಪು ಮೋಡದಂತೆ ಒಳ್ಳೆಯ ಕುಟುಂಬಗಳ ಬೆಳಕನ್ನು ಇರುಳಾಗಿಸುತ್ತದೆ. ಸಾಧ್ಯವಾದಷ್ಟು ಪ್ರತಿ ದಿನವೂ ದಿವ್ಯಬಲಿಪೂಜೆಯಲ್ಲಿ ಪಾಲ್ಗೊಳ್ಳಿರಿ. ಇದು ಅಸಾಧ್ಯವಾದರೆ ಸೋಮವಾರ ಮರಣಹೊಂದಿದ ಆತ್ಮಗಳಿಗಾಗಿಯೂ, ಶುಕ್ರವಾರ ಯೇಸುವಿನ ಯಾತನೆಗಳ ಸ್ಮರಣೆಗಾಗಿಯೂ, ಶನಿವಾರ ಪವಿತ್ರ ಮಾತೆಯ ವ್ಯಾಕುಲಗಳ ಭಕ್ತಿಗಾಗಿಯೂ ದಿವ್ಯಬಲಿಪೂಜೆಯಲ್ಲಿ ಪಾಲುಗೊಳ್ಳಿರಿ. ಒಂದು ಕುಟುಂಬದ ಸದಸ್ಯರೆಲ್ಲರೂ ಜೊತೆಯಾಗಿ ದಿವ್ಯ ಬಲಿಪೂಜೆಯಲ್ಲಿ ಪಾಲುಗೊಳ್ಳಲು ಸಾಧ್ಯವಾಗದಿದ್ದರೆ, ಒಂದೊಂದು ದಿನ ಒಬ್ಬರೋ ಇಬ್ಬರೋ ಸರತಿಯಾಗಿ ಹೋಗಿ ಬಲಿಪೂಜೆಯಲ್ಲಿ ಪಾಲುಗೊಳ್ಳಬೇಕು. ತಿಂಗಳಿಗೊಮ್ಮೆಯಾದರೂ ಪಾಪನಿವೇದನೆ ಮಾಡಿ ಪರಮ ಪ್ರಸಾದವನ್ನು ಸ್ವೀಕರಿಸಬೇಕು. ಮುಖ್ಯ ಹಬ್ಬಗಳ ನೋವೇನ ಜಪಗಳನ್ನೂ ದೇವ ಮಾತೆಯ ಹಬ್ಬದ ಹಾಗೂ ಸಂತ ಜೋಸೆಫರ ಮಾಸ ಭಕ್ತಿಗಳನ್ನು ದೇವಾಲಕ್ಕೆ ಹೋಗಿ ನಡೆಸಲು ಸಾಧ್ಯವಾಗದಿದ್ದರೆ ಅವುಗಳನ್ನು ತಮ್ಮ ತಮ್ಮ ಮನೆಗಳಲ್ಲಿಯೇ ನಡೆಸಬಹುದಾಗಿದೆ.

ನೀವು ಕುಳಿತಿರುವಾಗಲೂ , ನಿಂತಿರುವಾಗಲೂ ಮಲಗಿರುವಾಗಲು, ಆಟವಾಡುವಾಗಲೂ ವಿರಕ್ತಿ ಅಥವಾ ಸಭ್ಯತೆಯನ್ನು ಕಾಪಾಡಿರಿ. ಸಭ್ಯತೆಯಿಲ್ಲದ ನಡತೆ ಈ ಲೋಕದಲ್ಲಿಯೂ ದೇವರ

ಮುಂದೆಯೂ ಅತಿ ಅಪಮಾನಕರವಾದ ಸಂಗತಿ.

ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಸಭ್ಯತೆ ಇಲ್ಲದೆ ವಸ್ತ್ರ ಧರಿಸುವುದರಿಂದ ಹಾಗೂ ಶರೀರ ಭಾಗಗಳನ್ನು ಸ್ಪರ್ಶಿಸುವುದರಿಂದ, ಮತ್ತು ಗುರುಹಿರಿಯರು ಇದನ್ನು ನಿಷೇದಿಸದಿರುವುದರಿಂದ ಎಷ್ಟೋ ಆತ್ಮಗಳು ನರಕದಲ್ಲಿ ಪತನವಾಗಿದೆಯೆಂದು ಅಂತಿಮ ತೀರ್ಪಿನ ದಿನ ಮಾತ್ರ ನಮಗೆ ಗೊತ್ತಾಗುವುದು.

ಫ್ರಾನ್ಸ್ ದೇಶದಲ್ಲಿ ವಿರಕ್ತಿಯಿಂದ ಜೀವನ ನಡೆಸಿದ ಒಬ್ಬ ಬಾಲಕ ತಾನು ಒಂಟಿಯಾಗಿ ಕುಳಿತಿರುವಾಗಲೂ ದೇಹವನ್ನು ಸಂಪೂರ್ಣವಾಗಿ ಮತ್ತು ತನ್ನ ಕೈಗಳನ್ನು ಬಟ್ಟೆಯಿಂದ ಮುಚ್ಚಿಕೊಂಡು ನಡೆಯುವುದು ಅಭ್ಯಾಸವಾಗಿತ್ತು. ಈ ಬಾಲಕನು ಒಮ್ಮೆ ನರಕದಲ್ಲಿ ಬೆತ್ತಲೆಯಾಗಿ ಮಲಗಿರಬೇಕು ಎಂದು ಕೇಳಿದಾಗ ತುಂಬಾ ಭಯಪಟ್ಟು ಅತ್ತುಬಿಟ್ಟನಂತೆ. ಇದರಿಂದ ಈ ಬಾಲಕ ಎಷ್ಟರ ಮಟ್ಟಿಗೆ ಸಭ್ಯತೆ ಬಗ್ಗೆ ಆಸಕ್ತಿ ವಹಿಸಿದ್ದನು ಎಂದು ನಮಗೆ ಮನವರಿಕೆಯಾಗುತ್ತದೆ.

**ಸಹನೆ ಶೀಲತೆ**

೧೯. ಎಲ್ಲಾ ಬಗೆಯ ತಾಪತ್ರಯಗಳಲ್ಲೂ, ಕ್ಲೇಶಗಳಲ್ಲೂ ರೋಗಗಳಲ್ಲೂ ದೇವರ ಅಭಿಲಾಷಕ್ಕೆ ನಿನ್ನನ್ನೇ ಸಮರ್ಪಣೆ ಮಾಡಿಕೊಳ್ಳಬೇಕು. ಅತ್ಯಾನಂದದ ವೇಳೆಯಲ್ಲಿ ಮಾತ್ರ ಕ್ಷಮಿಸುವ ವ್ಯಕ್ತಿ ಶಕ್ತಿಗುಂದಿದ ವ್ಯಕ್ತಿ. ಒಬ್ಬ ಭಕ್ತನು ಈ ರೀತಿ ಹೇಳಿರುತ್ತಾನೆ. "ಈ ಲೋಕದಲ್ಲಿ ನಡೆಯುವ ಎಲ್ಲವೂ

ನನ್ನ ಅಭಿಲಾಷೆಯಂತೆ ನಡೆಯುತ್ತದೆ. ಯಾಕೆಂದರೆ ದೇವರ ಅಭಿಲಾಷೆಯೇ ನನ್ನ ಅಭಿಲಾಷೆ".

ಒಮ್ಮೆ ಸಂತ ಅಂಬ್ರೋಸನು ಒಂದು ಮನೆಗೆ ಹೋದಾಗ ಅ ಮನೆಯಲ್ಲಿ ಒಮ್ಮೆಯಾದರು ದುಃಖ, ಕ್ಲೇಶ, ಸಂಕಟಗಳು ಬರಲೇ ಇಲ್ಲ ಎಂದು ತಿಳಿದಾಗ ಈ ರೀತಿ ಹೇಳಿದರು. " ನಾವು ಈ ಮನೆಯಿಂದ ಬೇಗನೆ ಹೊರಟು ಹೋಗಬೇಕು. ಯಾಕೆಂದರೆ ಈ ಮನೆಯಲ್ಲಿ ಬಹುಬೇಗನೆ ದೇವರ ಶಾಪ ಬಂದೊದಗುತ್ತದೆ". ಅವರು ಅ ಮನೆಯಿಂದ ಹೊರಟು ಹೋದರು. ತಕ್ಷಣವೇ ಅ ಮನೆ ಕುಸಿದು ಬಿದ್ದು ಅದರೊಳಗಿದ್ದ ಎಲ್ಲಾರೂ ಸಾವನ್ನಪ್ಪಿದರು. ಯಾಕೆಂದರೆ ನಮಗೆ ಬಂದೊದಗುವ ಶಿಕ್ಷೆಗಳು ಮತ್ತು ಸಹನೆಗಳು ದೇವರ ಅಭಿಲಾಷೆಯನ್ನು ಗ್ರಹಿಸುವ ಲಕ್ಷಣವಾಗಿದೆ.

**ಒಳ್ಳೆಯ ಗ್ರಂಥಗಳು:**

೨೦. ದೇವರ ನಂಬಿಕೆ ಇಲ್ಲದ ಗ್ರಂಥಗಾರರ ವೈಜ್ಞಾನಿಕ ಗ್ರಂಥಗಳು ತಪ್ಪಾದ ಅರಿವು ಹಾಗೂ ಅಜ್ಞಾನವನ್ನು ಕಲಿಸಿ ಕೊಡುವ ಗ್ರಂಥಗಳಾಗಿವೆ. ಈ ರೀತಿಯ ಅಶ್ಲೀಲ ತುಂಬಿದ ಹಾಗೂ ಸಂಪ್ರದಾಯ ಬಾಹಿರ ಗ್ರಂಥಗಳನ್ನು ಮನೆಯಲ್ಲಿ ಸಂಗ್ರಹಿಸಿಡುವುದು ಹುಲ್ಲುಮೆದೆಯೊಳಗೆ ಬೆಂಕಿಯನ್ನು ಅವಿತುಕೊಂಡಂತೆ. ಭಕ್ತಿಯಲ್ಲಿ ಅಭಿವೃದ್ಧಿಹೊಂದಲು ಸಹಾಯ ನೀಡುವ ಜ್ಞಾನಭರಿತವಾದ ಹಾಗೂ ತಾತ್ವಿಕ ಬೋಧನೆಯ ಗ್ರಂಥಗಳನ್ನು ಮಕ್ಕಳಿಗೆ ನೀಡಬಹುದಾದ ಅಮೂಲ್ಯ ವಸ್ತುಗಳು. ಈ ಬಗೆಯ ಗ್ರಂಥಗಳನ್ನು ನಿಮಗೆ ಸಾಧ್ಯವಾದಷ್ಟು ಸಂಗ್ರಹಿಸಿಡಿರಿ.

ಒಬ್ಬಾತ ಭಿಕ್ಷುಕನಿಗೆ ಓದು ಬರಹ ಬರುತ್ತಿರಲಿಲ್ಲ. ಆದರೂ ಆತ ತನಗೆ ಭಿಕ್ಷೆ ಬೇಡಿ ಸಿಕ್ಕಿದ ಹಣದಿಂದ ಒಳ್ಳೆಯ ಗ್ರಂಥಗಳನ್ನು ಕೊಂಡು ಓದು ಬರಹ ತಿಳಿದಿರುವವರಿಂದ ಓದಿಸಿ ತಿಳಿದುಕೊಂದು ತನ್ನ ವರ್ತನೆ ಉನ್ನತ ಮಟ್ಟಕ್ಕೇರಿಸಿ, ಪುಣ್ಯಮಾರ್ಗದಲ್ಲಿ ನಡೆದು ಇತರರಿಗೂ ಒಳ್ಳೆಯ ಮಾದರಿಯಾದನಂತೆ.

## ಬದ್ಧ ದಿನಗಳು

೨೧. ಬದ್ಧ ದಿನಗಳಲ್ಲಿ ದಿವ್ಯ ಬಲಿಪೂಜೆಯಲ್ಲಿ ಪಾಲ್ಗೊಳ್ಳುವುದರಲ್ಲಿ ಮಾತ್ರ ತೃಪ್ತರಾಗದೆ ದಿನದ ಬಹುಪಾಲು ಧಾರ್ಮಿಕ ಪ್ರವಚನಗಳನ್ನು ಕೇಳುವುದಕ್ಕೂ ಒಳ್ಳೆಯ ಪುಸ್ತಕಗಳನ್ನು ಓದುವುದಕ್ಕೂ ಉಪಯೋಗಿಸಬೇಕು. ಅದೇ ರೀತಿಯಲ್ಲಿ ರೋಗಿಗಳನ್ನು, ಮುಖ್ಯವಾಗಿ ಬಡವರಾದ ರೋಗಿಗಳನ್ನು ಸಂದರ್ಶಿಸಿ ಅವರಿಗೆ ತಕ್ಕ ಶುಶ್ರೂಷೆ ಮಾಡುವುದರಲ್ಲಿ ಶ್ರದ್ಧೆ ವಹಿಸಬೇಕು.

ಮನೆಗೆಲಸಮಾಡಲು ದೇವರ ಭಯವಿರುವವರನ್ನು ಮಾತ್ರ ನೇಮಕ ಮಾಡಬೇಕು. ಅವರ ಸಂಖ್ಯೆ ಸಾಧ್ಯಾವಾದಷ್ಟು ಕಡಿಮೆಮಾಡಿಸುವುದು ಉತ್ತಮ. ಅನೇಕ ಮನೆಗಳಲ್ಲಿ ಸ್ಯೈತಾನನ ಆಳ್ವಿಕೆ ಪ್ರಾರಂಭವಾಗುವುದು ನೇಮಕಗೊಳಿಸುವ ಕೆಲಸದಾಳುಗಳಿಂದ. ಯಜಮಾನರಾದವರು ತಮ್ಮ ಸೇವಕರ ವರ್ತನೆಯ ಬಗ್ಗೆ ಜಾವಾಬ್ದಾರಿ ವಹಿಸಿ ಅವರ ಆದ್ಯಾತ್ಮಿಕ ಬೆಳವಣಿಗೆಯ ಬಗ್ಗೆ ಕಾಳಜಿ ವಹಿಸಬೇಕು.

## 22. ನಿತ್ಯಕ್ರಮಗಳು

ರಾತ್ರಿ ಮಲಗುವುದಕ್ಕೆ ಹಾಗೂ ಬೆಳಿಗ್ಗೆ ಎದ್ದೇಳುವುದಕ್ಕೆ ನಿಯಮಿತತನ ಇರುವಂತೆ ಖಚಿತಪಡಿಸಿಕೊಳ್ಳಿ.

ಈ ಕೆಳಕಂಡ ನಿತ್ಯಕ್ರಮಗಳನ್ನು ಎಲ್ಲರೂ ಪಾಲಿಸಬೇಕು. ಬೆಳಿಗ್ಗೆ ೬ ಗಂಟೆಗೆ ಮನೆಯವರೆಲ್ಲಾ ಎದ್ದು ಬೆಳಗಿನ ಜಾವದ ಪ್ರಾರ್ಥನೆಗಳನ್ನು ಜಪಿಸಬೇಕು. ನಂತರ ಸಾಧ್ಯಾವಾದವರೆಲ್ಲಾ ದಿವ್ಯಬಲಿಪೂಜೆಯಲ್ಲಿ ಪಾಲ್ಗೋಳ್ಳಬೇಕು. ಬೆಳಗ್ಗೆ ೮ ಗಂಟೆಗೆ ಬೆಳಗ್ಗಿನ ಉಪಾಹಾರ ಹಾಗೂ ೧೨ ಗಂಟೆಗೆ ಮದ್ಯಾಹ್ನದ ಊಟವನ್ನು ಮಾಡಬೇಕು. ಸಂಜೆ ಹೋತ್ತು ತ್ರಿಕಾಲ ಜಪವನ್ನು ಮುಗಿಸಿ ಎಲ್ಲರೂ ಸೇರಿ ಕುಟುಂಬ ಪ್ರಾರ್ಥನೆಗಳನ್ನು ಜಪಿಸಬೇಕು. ಇದಾದ ನಂತರ ಮುಂಚಿತವಾಗಿಯೇ ಓದಿದ್ದ ಒಳ್ಳೆಯ ಗ್ರಂಥಗಳ ಕುರಿತು ಅರ್ದಗಂಟೆ ಧ್ಯಾನ ಮಾಡಬೇಕು

ಮನೆಯಲ್ಲಿ ಎಷ್ಟೇ ದೊಡ್ಡ ಅತಿಥಿಗಳು ಗಣ್ಯರು ಇದ್ದರೂ ನಿನ್ನ ಕುಟುಂಬ ಪ್ರಾರ್ಥನೆಗೆ ಅದು ಭಂಗವಾಗಬಾರದು. ಯಾಕೆಂದೆರೆ ಒಂದು ಕಡೆ ನೀನು ನಿನ್ನ ಮನೆಗೆ ಬಂದ ಅತಿಥಿಗಳಿಗೆ ಶೂಶ್ರೂಷೆ ಮಾಡುತ್ತಿರುವಾಗ ಇನ್ನೊಂದು ಕಡೆ ನೀನು ದೇವರ ಸಂಭೋದನೆಯನ್ನೂ ಆಲಿಸುತ್ತಿರಬೇಕು. ಯಾಕೆಂದರೆ ದೇವರು ಸದಾ ಸಮಯ ನಿನ್ನ ಆಯ್ಕೆಗಳನ್ನು ಗಮನಿಸುತ್ತಿದ್ದಾರೆ. ಆದ್ದ-ರಿಂದ ಈ ಪುಣ್ಯಕಾರ್ಯಗಳನ್ನು ಮಾಡುವುದನ್ನು ಯಾವುದೇ ನೆಪದಿಂದಲೂ ಬಿಟ್ಟು ಬಿಡಬೇಡ. ಬೇರೆಯವರಿಗೆ ಈ ಕಾರ್ಯಕ್ರಮಗಳು ಒಂದು ಒಳ್ಳೆಯ ಮಾದರಿಯಾಗಿರುತ್ತದೆ. ಈ ರೀತಿಯ ಕೆಲಸಗಳನ್ನು ಮಾಡುವಾಗ ಇತರರು ನಿನ್ನನ್ನು ಪರಿಹಾಸ್ಯ ಮಾಡಿದರೆ ಅದು ನಿನಗೆ ಭಾಗ್ಯವಾಗಿ ಪರಿಣಮಿಸುತ್ತದೆ.

ರಾತ್ರಿ ಊಟವಾದ ಮೇಲೆ ನಿದ್ದೆಗೆ ಮುಂಚಿತವಾದ ಪ್ರಾರ್ಥನೆಗಳನ್ನು ಮಾಡಿ ನಿದ್ರಿಸಿರಿ. ಕುಟುಂಬದ ಯಜಮಾನರು

ಈ ವಿಧಿಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲು ಜಾಗ್ರತೆ ವಹಿಸಬೇಕು. ಪ್ರತೀ ಭಾನುವಾರ ಹಾಗೂ ತಿಂಗಳಿನ ಮೊದಲ ದಿನ ಮನೆಯಲ್ಲಿರುವ ಎಲ್ಲರೂ ಸೇರಿ ಈ ಕುಟುಂಬ ವಿಧಿಗಳನ್ನು ಓದಬೇಕು.

## ಭಾಗ ಎರಡು
## ಮಕ್ಕಳ ಬೆಳವಣಿಗೆ

೧. ತಂದೆ ತಾಯಂದಿರೇ, ನಿಮ್ಮ ಮಕ್ಕಳನ್ನು ಒಳ್ಳೆಯ ರೀತಿಯಲ್ಲಿ ಬೆಳೆಸುವ ಕಾರ್ಯ ನಿಮ್ಮ ಅತಿಮುಖ್ಯ ಕೆಲಸವೂ ಜಾವಾಬ್ದಾರಿಯೂ ಆಗಿದೆಯೆಂದು ಚೆನ್ನಾಗಿ ಅರಿತು ಕೊಳ್ಳಿರಿ. ನಿಮ್ಮ ಮಕ್ಕಳು ಸರ್ವೇಶ್ವರ ಸ್ವಾಮಿ ನಿಮ್ಮ ಕೈಗಳಲ್ಲಿ ನಿಕ್ಷೇಪಿಸಿದ ಒಂದು ನಿಕ್ಷೇಪ ದ್ರವ್ಯವಾಗಿದೆ. ಅಂತಿಮ ತೀರ್ಪಿನ ದಿನ ತಿರುಗಿ ಒಪ್ಪಿಸಲು ಕರ್ತಯೇಸು ನಿಮ್ಮ ಕೈಯಲ್ಲಿ ನಿಕ್ಷೇಪಿಸಿರುವ ಆತ್ಮಗಳು ಇವರೆಂದು ತಿಳಿದುಕೊಳ್ಳಿರಿ. ತಮ್ಮ ತಪ್ಪುಗಳ ಮುಖಾಂತರ ತಮ್ಮ ಮಕ್ಕಳಲ್ಲಿ ಒಬ್ಬರು ನರಕದಲ್ಲಿ ನಾಶವಾದರೆ, ಇದರಿಂದಾಗಿ ತಂದೆ ತಾಯಂದಿರ ಆತ್ಮೋಧ್ಧಾರಕ್ಕೆ ಅಡ್ಡಿಯಾಗುತ್ತದೆ. ತಂದೆ ತಾಯಂದಿರು ತಮ್ಮ ಮಕ್ಕಳ ಕಾರಣದಿಂದ ನರಕದಲ್ಲಿ ನಾಶವಾಗಿ ಹೋದರೆ ಆ ಮಕ್ಕಳು ಮಾಡಿದ ಎಲ್ಲಾ ತಪ್ಪುಗಳಿಗೂ ತೀರ್ಪಿನ ದಿನದಲ್ಲಿ ತಂದೆ ತಾಯಂದಿರನ್ನು ವಿಚಾರಿಸುವರು ಎಂದು ಒರಿಜನ್ ಎಂಬ ವೇದಾಂತಿಯು ಬರೆದಿದ್ದಾರೆ. ಆದರೆ ನಿಮ್ಮ ವೃದ್ಧಾಪ್ಯದಲ್ಲಿ ನಿಮ್ಮ ಜೊತೆ ಇರಲು ಹಾಗೂ ನಿಮ್ಮನ್ನು ನೋಡಿ ಕೊಳ್ಳಲು ಉತ್ತಮ ಮಕ್ಕಳು ನಿಮಗೆ ಇರಬೇಕಾದರೆ ಅವರನ್ನು ಸಣ್ಣ ವಯಸ್ಸಿನಲ್ಲೇ ಒಳ್ಳೆಯ ಕ್ರೈಸ್ತ ಧರ್ಮಾನುಯಾಯಿಯಾಗಿ ಬೆಳೆಸಬೇಕು. ಈ ಸಣ್ಣ ವಯಸ್ಸಿನಲ್ಲೇ ಅವರು ದೇವರನ್ನು ಪ್ರೀತಿಸದೆ, ದೇವರ ಭಯವಿಲ್ಲದೆ ಬೆಳೆದರೆ ನಂತರ ಅವರ ತಂದೆ ತಾಯಂದಿರ ಬಗ್ಗೆ ಹೆದರಿಕೆ ಹಾಗೂ ಗೌರವ ಕೊಡುವುದು ಕಷ್ಟಕರವಾದ ಸಂಗತಿ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಆಗಾಗ ದೇವರಿಗೆ

ಸಮರ್ಪಣೆ ಮಾಡಿ ಯೇಸುಸ್ವಾಮಿ, ಸಂತ ಮೇರಿ ಹಾಗೂ ಸಂತ ಜೋಸೆಫರ ಮಧ್ಯಸ್ಥಿಕೆಗೆ ಒಪ್ಪಿಸಿ, ಅವರಿಗಾಗಿ ಪ್ರಾರ್ಥನೆ ಮಾಡಬೇಕು. ಒಬ್ಬ ತಾಯಿಯ ಬೇಡಿಕೆಯೂ, ಕೈಗೂಸಿನ ಬೇಡಿಕೆಯೂ ದೇವರು ಪ್ರೀತಿಯಿಂದ ಆಲಿಸುವರು.

೨. ಮಕ್ಕಳಿಗೆ ಪಕ್ವವಯಸ್ಸಾದಾಗಲೇ ಯೇಸು, ಸಂತ ಜೋಸೆಫ್ ಮತ್ತು ಸಂತ ಮೇರಿಯವರ ಪೂಜ್ಯನಾಮಗಳನ್ನು ಭಕ್ತಿಯಿಂದ ಉಚ್ಛರಿಸಲು ಅವರನ್ನು ಕಲಿಸಬೇಕು. ಅವರ ಪೂಜ್ಯ ಪ್ರತಿಮೆಗಳನ್ನು ಪರಿಚಯ ಪಡಿಸಿ ಅದಕ್ಕೆ ಮುತ್ತು ಕೊಟ್ಟು ಅವರಿಗೆ ತಕ್ಕ ಗೌರವವನ್ನು ಕೊಡುವಂತೆಯೂ ಅವರನ್ನು ಪ್ರೀತಿಸುವಂತೆಯೂ ಕಲಿಸಬೇಕು. ಅವರು ಮಾತಾನಾಡುವುದಕ್ಕೆ ಶುರುವಾದಾಗಲೇ ಪರಲೋಕದಲ್ಲಿರುವ, ನಮೋ ಮರಿಯ, ತ್ರಿಕಾಲ ಜಪಗಳು, ಮುಂತಾದ ಸಣ್ಣ ಜಪಗಳನ್ನು ಹೇಳಲು ಕಲಿಸಬೇಕು. ಅವರ ಶರೀರಕ್ಕೆ ಬೇಕಾದ ಆಹಾರವನ್ನು ಅವರಿಗೆ ನೀಡುವ ಜೊತೆಯಲ್ಲಿಯೇ ಅವರ ಆತ್ಮಕ್ಕೆ ಬೇಕಾದ ಆತ್ಮೀಯ ಆಹಾರವನ್ನು ನೀಡುವುದು ತುಂಬಾ ಒಳ್ಳೆಯ ರೂಢಿಯಾಗಿದೆ.

೩. ಮಕ್ಕಳು ಸಣ್ಣವರಾಗಿರುವಾಗಲೇ ಮನೆಯೊಳಗೆ ಬಟ್ಟೆ ಹಾಕದೆ ಸುತ್ತಾಡಲು ಬಿಡಬೇಡ. ಅವರಿಗೆ ಏನೂ ತಿಳಿಯುವುದಿಲ್ಲ ಎಂಬ ನೆಪದಿಂದ ಕೆಟ್ಟ ಪದಗಳನ್ನು, ಗೊದ್ದು ಹರಟೆಗಳನ್ನು ಅವರ ಮುಂದೆ ಹೇಳಬಾರದು. ಕ್ರೈಸ್ತ ದೇಶಗಳಲ್ಲಿ ತಾಯಿಯು ಗರ್ಭಧರಿಸಿ ಹೆರುತ್ತಾಳೆ ಎಂಬ ವಿಷಯವನ್ನು ಕೂಡಾ ಮಕ್ಕಳಿಗೆ ತಿಳಿಸುವುದೇ ಇಲ್ಲ. ದೇವರು ಈ ಮಕ್ಕಳನ್ನು ಆಕಾಶದಿಂದ ನೀಡಿದರು ಎಂದು ಮಾತ್ರ ಮಕ್ಕಳಿಗೆ ತಿಳಿಸುತ್ತಾರೆ.

೪. ತಂದೆ ತಾಯಂದಿರು ತಿಳಿದಿರಬೇಕಾದ ಕೆಲವು ವಿಷಯಗಳು: ತಂದೆ ತಾಯಂದಿರ ಕೊಠಡಿಯಲ್ಲಿ ಮಕ್ಕಳನ್ನು ಮಲಗಿಸಬಾರದು. ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಒಂದಾಗಿ ಒಂದೇ ಕೊಠಡಿಯಲ್ಲಿ ಮಲಗಲು ಅನುಮತಿ ನೀಡಬಾರದು. ಯಾಕೆಂದರೆ ಸ್ವಾಭಾವಿಕವಾಗಿ ಅವರಿಗೆ ತಿಳಿಯದಿರುವ ವಿಷಯಗಳನ್ನು ಪಿಶಾಚಿಯು ಅವರಿಗೆ ಕಲಿಸಿಕೊಡುತ್ತದೆ.

೫. ಸಣ್ಣ ಪ್ರಾಯದಿಂದಲೇ ತಂದೆ ತಾಯಂದಿರಿಂದ ದೂರ ಹೋಗಿ ಸ್ನೇಹಿತರ ಜೊತೆ ಆಟವಾಡಲು ಮಕ್ಕಳಿಗೆ ಅನುಮತಿ ನೀಡಬೇಡಿರಿ. ಅವರನ್ನು ಕಾಯ್ದು ಪೋಷಣೆ ನೀಡುವ ಸೇವಕರನ್ನು ನಂಬಬೇಡಿ; ಹಲವುಬಾರಿ ಸಣ್ಣ ಮಕ್ಕಳನ್ನು ಹಾಳುಮಾಡುವುದು ಈ ರೀತಿಯ ಸೇವಕರು.

೬. ಒಂದು ಮಗು ಪಕ್ವ ವಯಸ್ಸಿಗೆ ಬಂದಾಗ ಅವನನ್ನು ಶಾಲೆಗೆ ಸೇರಿಸಬೇಕು. ಇದು ಮಾತ್ರಸಾಲದು; ಅವನು ಚೆನ್ನಾಗಿ ಓದುತ್ತಿದ್ದಾನೆಯೇ ಎಂದೂ, ಯಾರ ಯಾರ ಜೊತೆ ಗೆಳೆತನ ಬೆಳೆಸುತ್ತಿದ್ದಾನೆ ಎಂದೂ ವಿಚಾರಿಸಬೇಕು. ಪ್ರತೀ ಭಾನುವಾರ ಅವರು ವಾರದಲ್ಲಿ ಕಲಿತದ್ಧನ್ನು ಪುನರಾವಲೋಕನ ಮಾಡಬೇಕು.

೭. ಮಕ್ಕಳನ್ನು ಸಂಬಂಧಿಕರ ಮನೆಯಲ್ಲಿ ಮಲಗಲು ಬಿಡಬೇಡಿ. ಯಾಕೆಂದರೆ ಅನೇಕ ಬಾರಿ ಅವರು ದೇವದೂತರಾಗಿ ಹೋಗಿ, ಪಿಶಾಚಿಗಳಾಗಿ ಹಿಂತಿರುಗುವರು.

೮. ಏಳು ವಯಸ್ಸಾದಾಗ ಪಾಪ ನಿವೇದನೆಗೆ ಅಗತ್ಯವಾದದ್ದನ್ನೆಲ್ಲಾ ಅವರಿಗೆ ಕಲಿಸಿ ಪಾಪನಿವೇದನೆ ಮಾಡಿಸಬೇಕು. ಅದರಂತೆ ದೇವಮಾತೆಯ ಭಕ್ತರಾಗಲು ಅವರನ್ನು ಕಲಿಸಬೇಕು.

೯. ಮಕ್ಕಳೊಡನೆ ಅತಿಯಾದ ಕಟ್ಟುನಿಟ್ಟು ಹಾಗೂ ಅತಿಯಾದ ಮೃದು ಸ್ವಭಾವ– ಇವೆರಡೂ ದೋಷವುಂಟು ಮಾಡುತ್ತದೆ. ಅತಿ ವಾತ್ಸಲ್ಯ ಅಹಂಕಾರವನ್ನೂ ಅತಿಯಾದ ಕೋಪ ಮತ್ತು ಶಿಕ್ಷೆ ಭಯವನ್ನೂ ಆಶ್ರಯ ಮನೋಭಾವವಿಲ್ಲದಿರುವಿಕೆಯನ್ನು, ಬೌದ್ಧಿಕ ಅಶಕ್ತಿಗಳನ್ನೂ ಉಂಟು ಮಾಡುತ್ತವೆ. ಅವರನ್ನು ಶಿಕ್ಷಿಸುವುದಕ್ಕೆ ಮುಂಚೆ ವಿವೇಕ ಹಾಗೂ ಪರಿಪಕ್ವತೆಯಿಂದ ಅವರ ಮೇಲೆ ದೋಷಾರೋಪ ಮಾಡುವುದೂ, ಅಹಾರ ಕಮ್ಮಿ ಮಾಡುವುದೂ ಕೆಲವೊಮ್ಮೆ ಮೊಣಕಾಲೂರಿ ನಿಲ್ಲಿಸುವುದು ಪ್ರಾಯೋಗಿಕವಾಗಿ ಮಾಡಬಹುದಾದ ಕೆಲವು ಶಿಕ್ಷಾ ವಿಧಿಗಳು. ಮಕ್ಕಳನ್ನು ತಿದ್ದುವಾಗ ಅವರನ್ನು ದೂಷಣೆ ಮಾಡುವುದು ಅವರಿಗೆ ಒಳಿತನ್ನು ಮಾಡುವುದರ ಬದಲಾಗಿ ಅವರು ವಯಸ್ಸಿಗೆ ಬಂದಾಗ ಅವರ ಮಕ್ಕಳಿಗೂ ಈ ರೀತಿ ಮಾಡಲು ಕಲಿತು ಬಿಡುತ್ತಾರೆ. ತಾಯಿ ಸ್ವತಃ ಮಾದರಿ ನೀಡಿ ತಂದೆಯನ್ನು ಗೌರವಿಸಿ ಆದರಿಸಲು ಕಲಿಸಬೇಕು. ಒಬ್ಬ ತಂದೆ ತಾಯಿಯನ್ನು ಆದರಿಸಲೂ ಪ್ರೀತಿಸಲೂ ಮಕ್ಕಳಿಗೆ ಕಲಿಸಬೇಕು. ತಂದೆತಾಯಂದಿರು ಪರಸ್ಪರ ಆದರ, ಪ್ರೀತಿ, ಗೌರವ ತೋರಿಸದಿದ್ದರೆ ಮಕ್ಕಳೂ ಅವರನ್ನು ಗೌರವಿಸುವುದಿಲ್ಲ.

೧೦. ಸಣ್ಣಂದಿನಿಂದಲೇ ಇದು ಸರ್ವೇ ಸಾಮಾನ್ಯ ಎಂದು

ಹೇಳುತ್ತಾ ಸುಳ್ಳು, ಮೋಸ, ವಂಚನೆ ಇತ್ಯಾದಿಗಳನ್ನು ಮಾಡಲು ತರಬೇತಿ ನೀಡಬೇಡಿ. ಅವರಲ್ಲಿ ಯಾವುದೇ ತಪ್ಪುಗಳನು ಕಂಡರೂ ಅವುಗಳನ್ನು ತಿದ್ದಿರಿ. ಸತ್ಯ, ನೀತಿಯನ್ನು ಪ್ರೀತಿಸಲು ಅವರಿಗೆ ಕಲಿಸಿರಿ.

೧೧. ಸಂಜೆಹೊತ್ತು ತ್ರಿಕಾಲ ಗಂಟೆ ಮೊಳಗುವಾಗ ಮಕ್ಕಳೆಲ್ಲರೂ ಮನೆಯಲ್ಲಿ ಒಂದುಗೂಡಿ, ಜಪಗಳನ್ನು ಜಪಿಸಿದ ನಂತರ, ತಂದೆ ತಾಯಂದಿರಿಗೆ ನಮಸ್ಕರಿಸಿ ಅವರ ಕೈಗಳಿಗೆ ಮುತ್ತು ನೀಡಲು ಅವರಿಗೆ ಅಭ್ಯಾಸ ನೀಡಬೇಕು. ಹನ್ನೆರಡು ವರ್ಷ ಪೂರ್ತಿಯಾಗುವಾಗ ಅ ವಯಸ್ಸಿನಲ್ಲಿ ಅತ್ಯಂತ ಜಾಗರೂಕತೆ ವಹಿಸಬೇಕಾಗಿ ಬರುವುದರಿಂದ ತಂದೆ ತಾಯಂದಿರು ಮಕ್ಕಳನ್ನು ಮರಣದ ಸ್ಮರಣೆ, ಹಬ್ಬ, ಮದುವೆ, ಈ ರೀತಿಯ ಆಚರಣೆಗಳಿಗೆ ಮನೆಯಿಂದ ಹೊರಬಿಡದೆ ಅವರನ್ನು ಮನೆಯಲ್ಲಿಯೇ ಇರಿಸಿ ಅವರ ಪ್ರಾಯಕ್ಕನುಸಾರವಾದ ಕೆಲಸಗಳನ್ನು ಕಲಿಸಿ ಕೊಡಬೇಕು. ಹೆಣ್ಣು ಮಕ್ಕಳನ್ನು ಹಬ್ಬ ಆಚರಣೆಗಳಿಗೆ ಸ್ನೇಹಿತರ ಜೊತೆಗೂಡಲು ಸಿಂಗರಿಸಿ ಬಿಡುವುದು ನರಕದಿಂದ ಬಂದ ಒಂದು ಆಚರಣಾ ವಿಧಿ.

೧೨. ಅಂತಸ್ತು ಹಾಗೂ ದರ್ಜೆಯ ನೆಪದಿಂದ ಹೆಣ್ಣು ಮಕ್ಕಳನ್ನು ಸಿಂಗರಿಸಿ ನಡೆಸುವುದು, ತಮ್ಮ ಅಂತಸ್ತು ಹಾಗೂ ದ್ರವ್ಯಾನುಕೂಲತೆಗೆ ಮೀರಿ ಸೊಕ್ಕಿನಿಂದ, ಬಟ್ಟೆ ಆಭರಣಗಳನ್ನು ತೊಡಿಸಿ ನಡೆಸುವುದು, ಎಷ್ಟೋ ಆತ್ಮಗಳಲ್ಲಿ ನರಕದ ಬೆಂಕಿ ಉರಿಹೊತ್ತಿಸುತ್ತದೆ. ಒಂದು ಹೆಣ್ಣು ಮಗುವಿನ ಆಭರಣ, ಅವಳ ವಿನಯಶೀಲತೆ, ಧರ್ಮನಿಷ್ಟೆ, ಶಾಂತತೆ ಹಾಗೂ ಕಣ್ಣುಗಳ

ನಿಯಂತ್ರಣ ಇವುಗಳಲ್ಲಿ ಅಡಕವಾಗಿದೆ.

೧೩. ಮಕ್ಕಳ ಹೆಸರಲ್ಲಿ ತಂದೆ ತಾಯಂದಿರ ಮಧ್ಯೆ ಉಂಟಾಗುವ ಜಗಳಗಳು ನಿಮ್ಮ ಮಧ್ಯೆ ಇರಬಾರದು. ತಮ್ಮ ಮಕ್ಕಳಿಗೆ ಇತರರು ಅನಾದರ ತೋರಿಸಿದರು; ಅವರನ್ನು ಹೊಡೆದರು, ಇತ್ಯಾದಿ ವಿಷಯಗಳನ್ನು ಗಂಭಿರವಾಗಿ ತೆಗೆದು ಕೊಳ್ಳುವ ಹಿರಿಯರೂ ಮಕ್ಕಳ ಹಾಗೆಯೇ.

೧೪. ಮಕ್ಕಳಿಗೆ ಪಕ್ವ ವಯಸ್ಸಾದಾಗ ಅವರವರ ಅಂತಸ್ಥನ್ನು ಅಯ್ಕೆ ಮಾಡಲು ಪರಿಪೂರ್ಣ ಸ್ವಾತಂತ್ರ್ಯ ನೀಡಬೇಕು. ಯಾಕೆಂದರೆ ಅವರ ಜೀವನದ ಅಂತಸ್ತನ್ನು ನಿಶ್ಚಯಿಸುವುದು ದೇವರೂ ಅದನ್ನು ಆಯ್ಕೆ ಮಾಡುವುದು ಅವರವರ ಕರ್ತವ್ಯವೂ ಆಗಿದೆ. ಇದು ತಂದೆ ತಾಯಂದಿರ ಕೆಲಸವಲ್ಲ. ಈ ಕಾರಣದಿಂದಲೇ ಎಷ್ಟೋ ತಂದೆ ತಾಯಂದಿರು ಮತ್ತು ಮಕ್ಕಳು ನರಕದ ಯಾತನೆ ಅನುಭವಿಸುತ್ತಿದ್ದಾರೆ. ಅದ್ದರಿಂದ ಗಂಡು ಹುಡುಗನಿಗೆ ೧೬ ಅಥವಾ ೧೮ ಹಾಗೂ ಹೆಣ್ಣು ಮಗುವಿಗೆ ೧೪ ಅಥವಾ ೧೬ ವಯಸ್ಸು ಆದಾಗಲೇ ಅವರವರ ಅಂತಸ್ತುನ್ನು ಆಯ್ಕೆ ಮಾಡಿರಬೇಕು. ಆದರೆ ಮದುವೆಗೆ ಅವರ ಒಪ್ಪಿಗೆಯನ್ನು ಮೊದಲು ಖಚಿತಪಡಿಸಿಕೊಳ್ಳಬೇಕು. ಎಲ್ಲಾ ನೆಂಟಸ್ತಿಕೆಯನ್ನೂ ಆಯ್ಕೆ ಮಾಡುವಾಗ ಅವರ ಸಿರಿತನ, ಗೌರವಗಳಿಗಿಂತ ಒಳ್ಳೆಯ ಮರ್ಯಾದೆ ಹಾಗೂ ಒಳ್ಳೆಯ ಗುಣಗಳನ್ನು ಪರಿಗಣಿಸಬೇಕು. ಇದಿಲ್ಲದಿದ್ದರೆ ಆಮೇಲೆ ಮಕ್ಕಳಿಗೂ ತಂದೆ ತಾಯಂದಿರಿಗೂ ಸಂತೋಷದ ಬದಲಾಗಿ ಅತಿ ದುಃಖ ಉಂಟಾಗುತ್ತದೆ.

೧೫.	ಮಕ್ಕಳು ವಯಸ್ಸಿಗೆ ಬಂದರೂ, ಅವರು ವಿದ್ವಾಂಸರೂ ಕಾರ್ಯಕ್ಷಮತೆಯುಳ್ಳವರಾದರೂ ಅವರ ಮುಂದೆ ಅತಿಗೌರವ ಹಾಗೂ ಸಾಧು ಸ್ವಭಾವವನ್ನು ತೋರಿಸಬೇಡ. ಸಾಧ್ಯವಾದಷ್ಟು ಮನೆಯ ಅಧಿಕಾರ ಅವರಿಗೆ ಒಪ್ಪಿಸಿ ಕೊಡಬೇಡ. ಈ ನಿಟ್ಟಿನಲ್ಲಿ ತಂದೆ ತಾಯಂದಿರಿಗೆ ಎಷ್ಟೋ ಬಗೆಯ ಆಶಾಭಂಗಗಳು ಉಂಟಾಗಿವೆ.

೧೬.	ತಂದೆತಾಯಂದಿರು ತಮ್ಮ ಮರಣಕ್ಕೆ ಮುಂಚಿತವಾಗಿ ತಮ್ಮ ಮಕ್ಕಳಿಗೆ ಅವರದೇ ಆದ ಸ್ವಂತ ಮನೆಯಲ್ಲಿ ವಾಸಮಾಡಲು ಅನುವುಮಾಡಿ ಕೊಡಬೇಕು. ತಮ್ಮ ವ್ಯವಹಾರ ಜ್ಞಾನ ಕಳೆದು ಹೋಗುವ ಮೊದಲೇ ಮಕ್ಕಳಿಗೆ ಆಸ್ತಿ ಪಾಸ್ತಿಗಳನ್ನು ಭಾಗ ಮಾಡಿ ಕೊಡಬೇಕು. ಈ ರೀತಿ ಮಾಡದಿದ್ದರೆ ತಮ್ಮ ಮರಣದ ನಂತರ ತಮ್ಮ ಮಕ್ಕಳಲ್ಲಿ ಉಂಟಾಗುವ ಜಗಳ, ತರ್ಕ ಮುಂತಾದ ಪಾಪಗಳಿಗೆ ತಂದೆ ತಾಯಂದಿರು ಜವಾಬ್ದಾರಿ ವಹಿಸಬೇಕಾಗುತ್ತದೆ. ಕೊನೆಯದಾಗಿ ಮಕ್ಕಳೇ, ನೀವು ನಿಮ್ಮ ತಂದೆ ತಾಯಂದಿರಿಗೆ ಗೌರವ ನೀಡಲು ಹಾಗೂ ಅವರ ಮನಸ್ಸಿಗೆ ನೋವನ್ನುಂಟು ಮಾಡದಿರಲು ದೇವರ ಕಟ್ಟಳೆಯ ಮುಖಾಂತರವೇ ಭಾಧ್ಯಸ್ತರಾಗಿದ್ಧೀರೆಂದು ತಿಳಿದುಕೊಳ್ಳಿರಿ. ಆದ್ದರಿಂದ ದೇವರ ಕಟ್ಟಳೆಗಳಲ್ಲಿ, ನಾಲ್ಕನೇ ಕಟ್ಟಳೆಯನ್ನು ಉಲ್ಲಂಘನೆ ಮಾಡುವವರಿಗೆ ಪರಲೋಕದಲ್ಲಿ ಮಾತ್ರವಲ್ಲ, ಈ ಲೋಕದಲ್ಲಿಯೂ ದೇವರ ಶಾಪ ವಿಧಿಸಲಾಗಿದೆ ಎಂದು ಚೆನ್ನಾಗಿ ಜ್ಞಾಪಕದಲ್ಲಿಡಿ. ಜಪಾನ್ ಎಂಬ ಮೂರ್ತಿಪೂಜಾತತ್ವ ದೇಶದಲ್ಲಿ ಒಬ್ಬಾತ ತಾಯಿಗೆ ಮೂರು ಮಕ್ಕಳಿದ್ದರು. ಇವರು ತುಂಬಾ ಬಡವರಾಗಿದ್ದುದರಿಂದ ತಮ್ಮ ತಾಯಿಯನ್ನು ಅರ್ಹ

ರೀತಿಯಲ್ಲಿ ಪರಿಪಾಲನೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಆ ದೇಶದಲ್ಲಿರುವ ಕಳ್ಳರನ್ನು ಗಲ್ಲಿಗೆ ಹಾಕಬೇಕೆಂದೂ, ಕಳ್ಳರನ್ನು ಹಿಡಿದು ಕೊಡುವವರಿಗೆ ಅತಿ ದೊಡ್ಡ ಪಾರಿತೋಷಕ ನೀಡುವುದಾಗಿಯೂ ಒಂದು ನಿಯಮ ಜಾರಿಯಲ್ಲಿತ್ತು. ಆಗ ಈ ಮೂವರು ಮಕ್ಕಳು ತಮ್ಮ ತಾಯಿಗೆ ತೃಪ್ತಿದಾಯಕವಾಗಿ ಪೋಷಣೆ ನೀಡಲು ಬೇಕಾದ ಹಣ ಸಂಪಾದಿಸಲು ತಮ್ಮಲ್ಲಿ ಒಬ್ಬನು ಕಳ್ಳನೆಂದು ಸುಳ್ಳಾಗಿ ನಟಿಸಿ ಇನ್ನಿಬ್ಬರು ಆತನನ್ನಿಡಿದು ಸರಕಾರಕ್ಕೆ ಒಪ್ಪಿಸಿ ಪ್ರತಿ ಫಲವನ್ನು ಸ್ವೀಕರಿಸಿದರು ನಂತರ ಇವರಿಬ್ಬರೂ ಕಳ್ಳನ ಹತ್ತಿರ ಹೋಗಿ ಬೀಳ್ಕೊಡುವುದನ್ನೂ, ಧೈರ್ಯದಿಂದ ತಮ್ಮ ತಾಯಿಗಾಗಿ ಗಲ್ಲು ಶಿಕ್ಷೆ ಸ್ವೀಕರಿಸಬೇಕೆಂದು ಅವನಿಗೆ ಉಪದೇಶ ನೀಡುವುದನ್ನೂ ಕಂಡ ಅಧಿಕಾರಿಗಳು, ಈ ಕಳ್ಳನ ಮೇಲೆ ಇಷ್ಟೊಂದು ಕನಿಕರ ತೋರಲು ಕಾರಣವೇನೆಂದು ತನಿಖೆ ನಡೆಸಿದರು. ತಾಯಿಯ ಪ್ರೀತಿಗಾಗಿ ಪರಸ್ಪರ ಸಹೋದರರಾದ ಅವರಲ್ಲೊಬ್ಬರು ಮರಣಕ್ಕೆ ಸಿದ್ಧನಾಗಿದ್ದಲ್ಲದೆ, ಸ್ವತಃ ಕಳ್ಳನಾಗಿ ಪರಿವರ್ತನೆಗೊಂಡನೆಂದು ತಿಳಿದರು. ಈ ವಿಷಯಗಳನ್ನು ರಾಜನಿಗೆ ತಿಳಿಸಿದಾಗ ಅವನನ್ನು ಸ್ವತಂತ್ರನನ್ನಾಗಿ ಮಾಡಿದ್ದಲ್ಲದೆ ಅವರ ತಾಯಿ ಮರಣ ಹೊಂದುವ ತನಕ ಅವರಿಗೆ ಪೋಷಣೆ ನೀಡಲು ಅಜ್ಞೆ ಹೊರಡಿಸಿದನು. ಪ್ರಿಯ ಮಕ್ಕಳೇ, ಈ ಘಟನೆಯನ್ನು ನೀವೂ ಯಾವಾಗಲೂ ಜ್ಞಾಪಕದಲ್ಲಿಡಿ.

**ಪವಿತ್ರ ಕುಟುಂಬದ ಫಾದರ್ ಕುರಿಯಾಕೋಸ್ ಏಲಿಯಾ ಪ್ರಿಯರ್, ಮಾನ್ನಾನಂ ಆಶ್ರಮ ಹಾಗೂ ಕರ್ಮಲೀತರ ಮೂರನೇ ಸಭೆಯ ಇತರ ಆಶ್ರಯಿಗಳ ಪ್ರಿಯರ್.**

**13 ನೇ ಪೆಬ್ರವರಿ 1868**

# ಸಂತ ಕುರ್ಯಾಕೋಸ್ ಏಲಿಯಾಸ್ ಚಾವರ ಪಿತರ ಸಂಕ್ಷಿಪ್ತ ಜೀವನ ಚರಿತ್ರೆ.

ಸಂತ ಕುರ್ಯಾಕೋಸ್ ಏಲಿಯಾಸ್ ಚಾವರ ಪಿತರವರು ೧೮೦೫ ಪೆಬ್ರವರಿ ೧೦ ನೇ ತಾರೀಕು ಆಲಪ್ಪಿಯ ಕೈನಗರಿ ಎಂಬ ಗ್ರಾಮದಲ್ಲಿ ಚಾವರ ಕುಟುಂಬದಲ್ಲಿ ಜನಿಸಿದರು. ೧೮೧೫ ರಲ್ಲಿ ಪ್ರಥಮಿಕ ವಿದ್ಯಾಭ್ಯಾಸದ ನಂತರ ಚೇರ್‌ತಲ ಪಳ್ಳಿಪ್ಪುರಂ ಸಂತ ಮೇರಿ ದೇವಾಲಕ್ಕೆ ಸೇರಿದ ಸೆಮಿನರಿಯಲ್ಲಿ ದೈವಿಕ ಶಾಸ್ತ್ರಗಳಲ್ಲಿ ಗುರುವಾದ ಪಾಲಕ್ಕಲ್ ತೋಮಸ್ ಗುರುಗಳ ಅಧೀನದಲ್ಲಿ ಗುರು ದೀಕ್ಷೆಗಾಗಿ ಅಭ್ಯಾಸ ನಡೆಸಿದರು. ೧೮೨೭ ಸಬ್ ಡಯಕನೇಟ್, ೧೮೨೮ ರಲ್ಲಿ ಡೀಕನ್ ದೀಕ್ಷೆಯನ್ನು ಸ್ವೀಕರಿಸಿದರು. ೧೮೨೯ ನವೆಂಬರ್ ೨೯ ನೇ ತಾರೀಕು ಅರ್ತುಂಗಲ್ ಸಂತ ಆಂಬ್ರೋಸ್ ದೇವಾಲಯದಲ್ಲಿ ಗುರು ದೀಕ್ಷೆಯನ್ನು ಸ್ವೀಕರಿಸಿದರು. ತಾನು ಶಿಶುವಾಗಿದ್ದಾಗ ಚಾವರ ಪಿತರ ತಾಯಿ ಯೇಸು ಎಂಬ ನಾಮವನ್ನು ಜಪಿಸಿ ಬೆಳೆಸಿದ್ದರಿಂದ ಯೇಸುವಿಗಾಗಿ ನಿವೇದನೆಯ ಜೀವನ ನಡೆಸಬೇಕೆಂಬ ಆಸೆ ಮನಸ್ಸಲ್ಲಿ ತುಂಬಿತ್ತು.

ಗುರುಗಳಾದ ಮೇಲೆ ೧೮೩೧ ರಲ್ಲಿ ಗುರುಗಳಾದ ಪಾಲಕ್ಕಲ್ ತೋಮಸ್ ಹಾಗೂ ಪೋರೂಕ್ಕರ ತೋಮಸ್ ಅವರ ಜೊತೆ ಸೇರಿದ ಕುರ್ಯಾಕೋಸ್ ಏಲಿಯಾ ಪಿತರು ಮಾನ್ನಾನಂ ಬೆಟ್ಟದಲ್ಲಿ ಒಂದು ಆತ್ಮೀಯ ಭವನಕ್ಕೆ ಅಡಿಗಲ್ಲಿಟ್ಟರು, ಕಣಿಯಾಂದರ ಯಾಕೋಬ್ ಸಹೋದರನು ಇವರ ಜೊತೆ ಸೇರಿದರು. ಎಲ್ಲಾ ಲೌಕಿಕ ವಿಷಯಗಳಿಂದ ಏಕಾಂತತೆಯಲ್ಲಿ ವಾಸ

ಮಾಡಬೇಕೆಂಬುದು ಇವರ ಅಭಿಲಾಷೆಯಾಗಿತ್ತು. ಈ ಭವನಕ್ಕೆ ಬೇಸ್‌ಕಾಮ (ಎತ್ತರದಲ್ಲಿರುವ ಮನೆ) ಎಂಬ ಹೆಸರನ್ನು ನೀಡಿದರು. ಇದು ಬೆಳೆದು ನಿರ್ಮಲೋಲ್‌ಭವದ ದಾಸರ ಸಂಘ ಎಂಬ ಹೆಸರಲ್ಲಿ ಒಂದು ಸನ್ಯಾಸ ಸಮೂಹವಾದ ಸಿ. ಎಂ. ಐ ಸಭೆ ಆ ರೀತಿ ಪ್ರಾರಂಭವಾಯಿತು. ೧೮೪೧ ರಲ್ಲಿ ಪಾದರ್ ಪಾಲ್‌ಕ್ಕಲ್ ತೋಮಸ್ ನಿಧನ ಹೊಂದಿದರು. ೧೮೪೬ ರಲ್ಲಿ ಫಾದರ್ ಪೋರೂಕ್ಕರ್ ತೋಮಸ್ ಅವರೂ ನಿಧನರಾದಾಗ ಈ ಸಭೆಯ ಜವಾಬ್ದಾರಿ ಯೆಲ್ಲವೂ ತಮ್ಮ ಮರಣದ ತನಕ ಕುರ್ಯಾಕೋಸ್ ಏಲಿಯಾಸ್ ಪಿತರಲ್ಲಿ ನಿಕ್ಷಿಪ್ತವಾಯಿತು. ಕೇರಳ ಕ್ಯಾಥಲಿಕ್ ಸಭೆಯನ್ನು ಕ್ಷೋಭೆಗೊಳಿಸಿದ ರೋಕೋಸ್ ಛಿದ್ರದಿಂದ ಸಂರಕ್ಷಣೆ ನೀಡಲು ಕುರ್ಯಾಕೋಸ್ ಎಲಿಯಾಸ್ ಪಿತರನ್ನು ಆರ್ಚ್‌ಬಿಷಪ್‌ರವರು ವಿಕರ್ ಜನರಲ್ ಆಗಿ ನೇಮಕ ಮಾಡಿದರು. ೧೮೩೧ ರಿಂದ ಮಾನ್ನನಂನಲ್ಲಿ ಕಾರ್ಯನಿರ್ವಹಿಸಿದ ಕುರ್ಯಾಕೋಸ್ ಏಲಿಯಾಸ್ ಪಿತರು ವಿದ್ಯಾಭ್ಯಾಸದ ಏಳಿಗೆಗಾಗಿ ಒಂದು ಸಂಸ್ಕೃತ ಶಾಲೆಯನ್ನು ಆರಂಬಿಸಿ, ಮರದಿಂದ ನಿರ್ಮಿಸಿದ ಮುದ್ರಣ ಯಂತ್ರವನ್ನು ಸ್ಥಾಪನೆ ಮಾಡಿದರು. ಆರಾಧನಾ ವಿಧಿಗಳನ್ನು ಹೊಸರೂಪಕ್ಕೆ ತಂದು ದೇವಾಲಯಗಳಲ್ಲಿ ಭಾನುವಾರದ ಪ್ರವಚನಗಳನ್ನೂ ಜನರ ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಧ್ಯಾನ ಪ್ರವಚನಗಳನ್ನು ವ್ಯವಸ್ಥೆಮಾಡಿದರು. ಸಂತ ಚಾವರ ಪಿತರು ತನ್ನ ಜೀವನದ ಕೊನೆಯ ೭ ವರ್ಷಗಳ ಕಾಲ ಕೂನಮ್ಮಾವಲ್ಲಿ ವ್ಯಯ ಮಾಡಿದರು ೧೮೬೬ ರಲ್ಲಿ ಭಾರತದ ಪ್ರಪ್ರಥಮ ದೇಶೀಯ ಸನ್ಯಾಸಿನೀ ಸಮೂಹವಾದ ಸಿ ಎಂ ಸಿ ಸಭೆಯನ್ನು ಆರಂಭಿಸಿದರು. ೧೮೭೧ ರಲ್ಲಿ ಭಾಗ್ಯ ಮರಣ ಹೊಂದಿದ ಕುರ್ಯಾಕೋಸ್ ಪಿತರನ್ನು

ಕೂನ್‌ಮ್ಮಾವ್ ಸೆಂಟ್ ಫಿಲೋಮಿನಾಸ್ ದೇವಾಲಯದಲ್ಲಿ ಸಂಸ್ಕಾರ ಮಾಡಿದರು. ಆಮೇಲೆ ೧೮೮೯ ಮೇ ೨೪ ರಂದು ಚಾವರ ಪಿತರ ಅವಶಿಷ್ಟಗಳನ್ನು ಕೂನಮ್ಮಾವಿನಿಂದ ಸಿ. ಎಂ. ಐ ಸಭೆಯ ಮಾತೃಭವನವಾದ ಮಾನ್ನಾನಂ ಆಶ್ರಮ ದೇವಾಲಯದಲ್ಲಿ ಪುನಃ ಸ್ಥಾಪಿಸಿದರು.

ತಾವು ಜೀವಿಸಿರುವಾಗಲೇ ಪರಿಶುದ್ಧಿಯ ಪರಮ ಕಾಷ್ಠೆಯಲ್ಲಿದ್ದ ಚಾವರ ಪಿತರ ಮರಣ ನಂತರ ಅನೇಕರಿಗೆ ಆಶ್ರಯ ಕೇಂದ್ರವಾದರು. ತನ್ನ ಮಧ್ಯಸ್ಥಿಕೆ ಮೂಲಕ ಪ್ರಾರ್ಥನೆ ಮಾಡುವವರಿಗೆ ಅನುಗ್ರಹಗಳನ್ನು ನೀಡಿದ ಚಾವರ ಪಿತರ ಕೀರ್ತಿ ಊರಲ್ಲೆಲ್ಲಾ ತುಂಬಿತು. ಸಂತ ಅಲ್ಫೋನ್ಸಾರವರು ವ್ಯಾಧಿಗ್ರಸ್ಥರಾಗಿದ್ದಾಗ ಚಾವರ ಪಿತರ ಮಧ್ಯಸ್ಥಿಕೆ ಯಾಚಿಸಿ, ಅದರ ಫಲವಾಗಿ ಚಾವರ ಪಿತರು ರೋಗ ನಿವಾರಣೆ ನೀಡಿದ್ದಾಗಿ ಸಂತ ಅಲ್ಫೋನ್ಸಾರವರೇ ಸ್ವಂತ ಹಸ್ತಾಕ್ಷರದಲ್ಲಿ ಬರೆದಿದ್ದಾರೆ.

ಚಾವರಪಿತರನ್ನುಸಂತರನ್ನಾಗಿಪರಿಗಣಿಸುವಕಾರ್ಯವಿಧಾನಗಳು ೧೯೫೬ ರಲ್ಲಿ ಪ್ರಾರಂಭವಾಯಿತು. ೧೯೮೬ ಫೆಬ್ರವರಿ ೮ ರಂದು ಕೋಟಯಂನಲ್ಲಿ ಪವಿತ್ರ ಪಿತ ಜೋನ್ ಪೌಲ್ ಎರಡನೇ ಪೋಪ್ ಗುರುಗಳು ಚಾವರ ಪಿತರನ್ನು ಮಂಗಳಾತ್ಮಕ ಪದವಿಗೆ ಏರಿಸಿದರು. ೨೦೧೪ ನವೆಂಬರ್ ೨೩ ರಂದು ರೋಂನಲ್ಲಿ ಕುರ್ಯಾಕೋಸ್ ಏಲಿಯಾಸ್ ಚಾವರ ಪಿತರನ್ನು ಸಂತರೆಂದು ಪವಿತ್ರ ಪಿತ ಫ್ರಾನ್ಸಿಸ್ ಪೋಪ್ ಗುರುಗಳು ನಾಮಕರಣ ಮಾಡಿದರು. ಮಾನ್ನಾನಂ ಸಂತ ಜೋಸೆಫರ ಆಶ್ರಯ ದೇವಾಲಯದ ಬಲಿ ಪೀಠದ ಮುಂದೆ ಕುರ್ಯಾಕೋಸ್

ಏಲಿಯಾಸ್  ಚಾವರ ಪಿತರ ಬೌತಿಕ ಅವಶಿಷ್ಟಗಳು ತುಂಬಿದ ಸಮಾಧಿಯು ನೆಲೆ ನಿಂತಿದೆ.

## ಕುಟುಂಬಗಳಿಗಾಗಿ ಸಂತ ಚಾವರ ಪಿತರೊಡನೆ ಮಧ್ಯಸ್ಥಿಕೆ ಪ್ರಾರ್ಥನೆ

ಪಿತ ಸುತ ಮತ್ತು ಪವಿತ್ರಾತ್ಮರಾದ ದೇವರೇ ದೈವೀಕ ಜೀವನದಲ್ಲಿ ಬೆಳೆಯುವುದರಲ್ಲಿ ಹಾಗೂ ನಿಮ್ಮನ್ನು ಗೌರವಿಸುವುದರಲ್ಲಿ ಮಾದರಿಯಾಗಿ ಸಂತ ಚಾವರ ಕುರ್ಯಾಕೋಸ್ ಏಲಿಯಾಸ್ ರವರನ್ನು ನಮಗೆ ನೀಡಿರುವುದಕ್ಕೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ.

ಪವಿತ್ರ ಕುಟುಂಬದ ಭಕ್ತನಾದ ಚಾವರ ಪಿತನೇ, ನಮ್ಮ ಕುಟುಂಬಗಳಿಗಾಗಿ ಪ್ರತ್ಯೇಕ ಮಧ್ಯಸ್ಥಿಕೆ ವಹಿಸಿರಿ. ನಿಮ್ಮ ಹಾಗೂ ದೇವರ ಮೇಲಿನ ನಂಬಿಕೆಯಲ್ಲೂ ಪರಿಶುದ್ದತೆಯಲ್ಲೂ ನಾವು ಬೆಳೆಯಲು ಹಾಗೂ ಪ್ರೀತಿಯಲ್ಲೂ ಐಕ್ಯದಲ್ಲೂ ಅವಿರತ ಯತ್ನ ಮಾಡಲು ನಮಗೆ ಸಹಾಯ ನೀಡಿರಿ. ಜೀವನದಲ್ಲಿನ ಯಾತನೆಗಳನ್ನು ಗೆಲ್ಲಲು ಬೇಕಾದ ಶಕ್ತಿಯನ್ನೂ, ಮನಸ್ಸಿಗೂ ಶರೀರಕ್ಕೂ ಅರೋಗ್ಯವನ್ನೂ ದಯಪಾಲಿಸಿರಿ. ಪ್ರತಿ ದಿನ ದೇವರ ಚಿತ್ತವನ್ನು ಮಾತ್ರ ಹುಡುಕಲು, ಇದ್ದುದ್ದನ್ನು ವೃದ್ಧಿಗೊಳಿಸಿ ಸಂತೃಪ್ತಿಯಿಂದ ಜೀವನ ನಡೆಸಲು ನಮಗೆ ಕಲಿಸಿ ಕೊಡಿ.

ನಮ್ಮ ಕುಟುಂಬಗಳಲ್ಲಿನ ಪ್ರತಿಯೊಬ್ಬ ಸದಸ್ಯರ ಅನೇಕ ಬಗೆಯ ಅವಶ್ಯಕತೆಗಳನ್ನು ದೇವರ ಸನ್ನಿಧಿಯಲ್ಲಿ ಅರ್ಪಿಸಿ ಅನುಗ್ರಹ ನೀಡಿರಿ. ನಮ್ಮ ಕುಟುಂಬಗಳಿಂದ ಪೌರೋಹಿತ್ಯ ಹಾಗೂ ಸನ್ಯಾಸ ಜೀವನಕ್ಕೆ ಅನೇಕ ದೇವಸಂಬೋಧನೆಗಳೂ ಹಾಗೂ ನಮಗೆ ಅಗತ್ಯವಾದ ಈ ಪ್ರತ್ಯೇಕ ಕೃಪೆಯೂ_________________ (ಮೌನವಾಗಿ ನಿಮ್ಮ ಮೊರೆಯನ್ನು ಅರ್ಪಿಸಿ) ಕರ್ತ ಯೇಸುವಿನ ಮೂಲಕ ನಮಗೆ ದಯಪಾಲಿಸಿರಿ. ಆಮೇನ್.

೧ ಪರಲೋಕ ೧ ನಮೋ ಮ್ಮರಿಯಾ ೧ ಪಿತನ ಸುತನ______

## ಸಂತ ಕುರ್ಯಾಕೋಸ್ ಏಲಿಯಾಸ್ ಚಾವರ ಜೀವನದ ಮೈಲಿಗಲ್ಲುಗಳು.

| | |
|---|---|
| ೧೦.೦೨.೧೮೦೫ | ಜನನ ( ಕುಟ್ಟಿನಾಡಿನ ಕೈನಗರಿಯಲ್ಲಿ) |
| ೧೮.೦೨.೧೮೦೫ | ಜ್ಞಾನಸ್ನಾನ (ಚೆನ್ನಂಗರಿ ದೇವಾಲಯದಲ್ಲಿ) |
| ೦೮.೦೯.೧೮೦೫ | ಪರಿಶುದ್ಧ ಕನ್ಯಾಕಾ ಮಾತೆಗೆ ವೆಚ್ಚೂರ್ ದೇವಾಲಯದಲ್ಲಿ ಮೀಸಲಿಟ್ಟರು. |
| ೧೮೧೦–೧೮೧೫ | ಪ್ರಾಥಮಿಕ ವಿದ್ಯಾಭ್ಯಾಸ |
| ೧೮೧೮ | ಪಳ್ಳಿಪ್ಪುರಂ ಸೆಮಿನರಿ ಸೇರಿದರು. |
| ೨೯.೧೧.೧೮೨೯ | ಪೌರೋಹಿತ್ಯ ದೀಕ್ಷೆ ಅರ್ತುಂಗಲ್ ದೇವಾಲಯದಲ್ಲಿ |
| ೧೮೩೧ | ಭಾರತದ ಮೊಟ್ಟ ಮೊದಲ ದೇಶೀಯ ಸನ್ಯಾಸ ಸಭೆಯ (ಸಿ.ಎಂ.ಐ) ಸ್ಥಾಪನೆ. |
| ೧೮೩೧ | ಭಾನುವಾರ ಪ್ರವಚನಗಳೂ ವಿಚಾರಣಾ ಧ್ಯಾನಗಳೂ, ಪುರೋಹಿತರಿಗಾಗಿ ಧ್ಯಾನ ಗಳೂ ಜಾರಿಗೆ ಬಂತು. |
| ೧೮೩೩ | ಸುರಿಯಾನಿ ಕಥೋಲಿಕಾ ಸಮೂಹದ ಪ್ರಥಮ ಸೆಮಿನರಿ ಮಾನ್ನಾನಂನಲ್ಲಿ ಸ್ಥಾಪಿಸಿ ನಡೆಸಲು ಸಹಾಯ ನೀಡಿದರು. |
| ೧೮೩೮ | ಶಿಲುಬೆಯ ಹಾದಿ ಎಂಬ ಭಕ್ತ ಕಾರ್ಯವನ್ನು ಕೇರಳದ ಮನ್ನಾನಂನಲ್ಲಿ ಆರಂಭಿಸಿದರು. |
| ೧೮೪೪ | ಸುರಿಯಾನಿ ಸಭೆಯ ಮಲ್ ಪಾನ್ (ಆಧ್ಯಾತ್ಮಿಕ ಶಾಸ್ತ್ರಗಳ ಅಧ್ಯಾಪಕ) ಹಾಗೂ ಪುರೋಹಿತರ ಮೌಲ್ಯ ಮಾಪಕರಾಗಿ ನೇಮಕಾತಿ |

| | |
|---|---|
| ೧೮೪೬ | ಸುರಿಯಾನಿ ಕ್ಯಾಥೊಲಿಕ್ ಸಮೂಹದ ಮೊದಲ ಮುದ್ರಣ ಯಂತ್ರ ಹಾಗೂ ಪ್ರಕಾಶಕ ಮನೆಯನ್ನು ಮಾನ್ನಾನಂನಲ್ಲಿ ಸ್ಥಾಪನೆ |
| ೧೮೪೬ | ಕ್ಯಾಥಲಿಕ್ ಸಮೂಹದ ಮೊದಲ ಸಂಸ್ಕೃತ ಶಾಲೆ ಸ್ಥಾಪನೆ |
| ೧೮೪೯ | ಕೇರಳ ಸಭೆಯ ವಚನ ಪ್ರಬೋಧಕರಾಗಿ ವರಾಪುಳ ಲುದುವಿಕ್ ಧರ್ಮಗುರುಗಳು ಚಾವರ ಪಿತರನ್ನು ಅವರ ಹಿಂಬಾಲಕರನ್ನು ನಿಯಮಿಸಿದರು. |
| ೧೮೫೩ | ಸೂರಿಯಾನಿ ಕ್ಯಾಥಲಿಕ್ ಅವರ ಮೊದಲನೇ ವಿಶ್ವಾಸ ಪರಿಶೀಲನೆಯ ಕೇಂದ್ರವನ್ನು ಮಾನ್ನಾನಂನಲ್ಲಿ ಪ್ರಾರಂಭಿಸಿದರು. |
| ೧೮೫೫ | ನಿರ್ಮಲೋಲ್ಬವ ಸಂಘ ಎಂಬ ಹೆಸರು ಮೊದಲಬಾರಿಗೆ ಸನ್ಯಾಸ ಸಭೆಗೆ ನೀಡಿದರು. |
| ೮.೧೨.೧೮೫೫ | ಭಾರತದಲ್ಲಿ ಮೊಟ್ಟ ಮೊದಲನೆಯದಾಗಿ ಸನ್ಯಾಸ ವ್ರತಗಳನ್ನು ಸ್ವೀಕರಿಸಿದ ಗುರುಗಳು |
| ೧೮೫೭ | ಏಕ್‌ಳೊಗಳು ಅಥವಾ ಕುರುಬನ ನಾಟಕಗಳನ್ನು ಬರೆದು ಕೂನಮ್ಮಾವಲ್ಲಿ ಅಭಿನಯಿಸಿದರು |
| ೧೮೫೯ | ಪುತ್ತನ್‌ಪಳ್ಳಿಯಲ್ಲಿ ಸನ್ಯಾಸಿನಿಯರ ಆಶ್ರಮಕ್ಕಾಗಿ ಏರ್ಪಾಡುಗಳನ್ನು ಮಾಡತೊಡಗಿದರು. |
| ೮.೦೬.೧೮೬೧ | ಕೇರಳ ಸಭೆಯ ಆರ್ಚಡೀಕನ್ಸ್ ನಂತರ |

ಮೊದಲ ವಿಕಾರಿ ಜನರಲ್ ಆಗಿ ನೇಮಕಗೊಂಡರು.

೧೮೬೧ ಕೇರಳ ಸಭೆಯಲ್ಲುಂಟಾದ ರೋಕೋಸ್ ಛಿದ್ರಣವನ್ನು ನೆಲಸಮ ಮಾಡಲು ನಾಯಕತ್ವ ವಹಿಸಿದರು.

೧೮೬೨ ಮಲಯಾಳಂ ಭಾಷೆಯ ಮೊದಲ ಖಂಡ ಕಾವ್ಯ "ಅನಸ್ತಾಸ್ಯಾಯುಡೆ ರಕ್ತಸಾಕ್ಷಿತ್ವಂ" ರಚಿಸಿದರು.

೧೮೬೪ "ಒಂದು ದೇವಾಲಯಕ್ಕೆ ಒಂದು ಪಾಠಶಾಲೆ" ಎಂಬ ಕಲ್ಪನೆಯನ್ನು ವಿಕಾರಿ ಜನರಲ್ ಆಗಿರುವಾಗ ಕಾರ್ಯಗತ ಗೊಳಿಸಿದರು.

೧೮೬೫ ಪರಿಶುದ್ಧ ಕನ್ಯಾಕಾ ಮಾತೆಯ ಮೇ ತಿಂಗಳ ಉಪಾಸನೆಯನ್ನು ಮೊಟ್ಟ ಮೊದಲನೆಯದಾಗಿ ಕೇರಳದ ಮಾನ್ನಾನಂನಲ್ಲಿ ಆರಂಭಿಸಿದರು.

೧೮೬೨–೧೮೬೯ ದಿವ್ಯಬಲಿಪೂಜಾಕ್ರಮ, ಪೂಜ್ಯಘಂಟೆಗಳ ಪ್ರಾರ್ಥನೆ, ಮರಣ ಹೊಂದಿದವರ ಸ್ಮರಣೆ; ಮೊದಲಾದ ಆರಾಧನಾ ವಿಧಿಗಳ ನವೀಕರಣಕ್ಕೆ ನಾಯಕತ್ವ ವಹಿಸಿದರು.

೧೩.೦೨.೧೮೬೬ ಕೇರಳದಲ್ಲಿನ ಮೊಟ್ಟಮೊದಲ ಸನ್ಯಾಸಿನೀ ಸಭೆಯನ್ನು (ಸಿ.ಎಂ.ಸಿ) ಲಯೋಪೋಲ್ಡ್ ಧರ್ಮ ಪ್ರಚಾರಕರ ನೆರವಿನಿಂದ ಕೂನಮ್ಮಾವಿಲ್ಲಿ ಆರಂಭಿಸಿದರು.

೧೫.೦೨.೧೮೬೬ ಪವಿತ್ರ ಸಂಸ್ಕಾರದ ೪೦ ಘಂಟೆ ಆರಾಧನೆ ಕೇರಳ ಸಭೆಯಲ್ಲಿ ಕೂನಮ್ಮಾವಿನಲ್ಲಿ

| | |
|---|---|
| | ಆರಂಭಿಸಿದರು. |
| ೦೨.೦೧.೧೮೬೮ | ಹೆಣ್ಣು ಮಕ್ಕಳಿಗಾಗಿ ಮೊದಲ ಶಾಲೆ ಹಾಗೂ ಅನ್ನ ಹಾಕಿ ವಿದ್ಯೆ ಕಲಿಸುವ ಶಾಲೆಯನ್ನು ಲಯೋಪೋಲ್ಡ್ ಧರ್ಮ ಪ್ರಭಾರಕರ ನೆರವಿನಿಂದ ಕೂನಮ್ಮಾ-ವಿನಲ್ಲಿ ಆರಂಭಿಸಿದರು. |
| ೧೨.೦೨.೧೮೬೮ | "ಒಬ್ಬ ಒಳ್ಳೆಯ ಪಿತನ ಅಂತಿಮ ಕಿರು ನುಡಿಗಳು" ಕುಟುಂಬ ನವೀಕರಣ ವಿಧಿಯನ್ನು ರೂಪಿಸಿದರು. |
| ೧೮೬೯ | ಕೇರಳ ಸಭೆಯ ಮೊಟ್ಟ ಮೊದಲ ಸಾಮಾನ್ಯರ ಧಾರ್ಮಿಕ ಸಂಸ್ಥೆ "ಸಂತ ಜೋಸೆಫರ ಒಳ್ಳೆಯ ಮರಣದ ಸಂಘ" ವನ್ನು ಕೈನಗರಿಯಲ್ಲಿ ಸ್ಥಾಪಿಸಿದರು. |
| ೧೮೬೯ | ರೋಗಿಗಳಿಗೆ, ವೃದ್ಧಾಪಿಗಳಿಗೆ ಹಾಗೂ ನಿರಾಧಾರಿಗಳಿಗೆ ಮೊದಲ ನಿರಾಧಾರ-ಮನೆ "ಉಪವಿಶಾಲ" ಕೈನಗರಿಯಲ್ಲಿ ಸ್ಥಾಪಿಸಿದರು. |
| ೧೮೬೯ | ಕ್ಯಾಥೋಲಿಕ್ ಪುನರ್ಮಿಲನ ಚಳವಳಿ-ಯನ್ನು ಪ್ರಾರಂಭಿಸಿದರು. |

**ಆಶ್ರಮ ಸ್ಥಾಪನೆ**

| | |
|---|---|
| ೧೮೩೧ | ಸಂತ ಜೊಸೆಫರ ಆಶ್ರಮ, ಮಾನ್ನಾನಂ |
| ೧೮೫೭ | ಸಂತ ಜೋಸೆಫರ ಆಶ್ರಮ, ಕೂನಮ್ಮಾವ್ |
| ೧೮೫೮ | ಸಂತ ಮೇರಿಯವರ ಆಶ್ರಮ, ಎಲ್ತುರುತ್ತ್ |
| ೧೮೫೯ | ಕಾರ್ಮೆಲ್ ಆಶ್ರಮ, ವಾಳಕುಳಂ |
| ೧೮೬೧ | ಸಂತ ಸೆಬಾಸ್ಟಿನ್ ಆಶ್ರಮ, ಪುಳಿಂಕುನ್ನು |

| | |
|---|---|
| ೧೮೬೬ | ಸಂತ ತೆರೇಸ ಸನ್ಯಾಸಿನೀ ಆಶ್ರಮ, ಕೂನಮ್ಮಾವ್ |
| ೧೮೬೮ | ಅಮ್ಮ ತೆರೇಸರ ಆಶ್ರಮ, ಅಂಬಳಕ್ಕಾಡ್ |
| ೧೮೭೦ | ಶಿಲುಬೆಯ ಯೊಹಾನ್ನರ ಆಶ್ರಮ, ಮುತ್ತೋಲಿ |
| ೩.೦೧.೧೮೭೧ | ಮರಣ– ಕೂನಮ್ಮಾವ್ ಸಂತ ಜೋಸೆಫರ ಆಶ್ರಮದಲ್ಲಿ |
| ೪.೦೧.೧೮೭೧ | ಮೃತ ಸಂಸ್ಕಾರ – ಕೂನಮ್ಮಾವ್ ಸಂತ ಫಿಲೋಮಿನರ ದೇವಾಲಯದಲ್ಲಿ |
| ೨೪.೦೫.೧೮೮೯ | ಕೂನಮ್ಮಾವಿನಿಂದ ತಮ್ಮ ಅವಶಿಷ್ಟ–ಗಳನ್ನು ಮೂನ್ನಾನಂಗೆ ವರ್ಗಾಯಿಸಿದರು. |
| ೨೧.೧೨.೧೯೩೬ | ಸಂತರಾಗಿ ನಾಮಕರಣ ಮಾಡಿಸಲು ಕೇರಳ ಸಭೆ ತೀರ್ಮಾನ ತೆಗೆದುಕೊಂಡರು. |
| ೯.೧೨.೧೯೫೫ | ಸಂತರಾಗಿ ನಾಮಕರಣ ಮಾಡಿಸಲು ಕಾರ್ಯಕ್ರಮಗಳನ್ನು ಆರಂಭಿಸಲು ರೋಮಿನಿಂದ ಅನುಮತಿ. |
| ೩.೦೧.೧೯೫೮ | ದೇವರ ದಾಸ (ಮಾನ್ನಾನಂ) |
| ೭.೦೪.೧೯೮೪ | ದನ್ಯರು (ರೋಂ) |
| ೮.೦೨.೧೯೮೬ | ಮಂಗಳಾತ್ಮರು(ಕೋಟ್ಟಾಯಂನಲ್ಲಿಜಾನ್ ಪಾಲ್ ಎರಡನೇ ಪೋಪ್ ಗುರುಗಳು) |
| ೨೦.೧೨.೧೯೮೭ | ಸಾಮಾಜಿಕ ಸೇವೆಯನ್ನು ಅಂಗೀಕರಿಸಿ ಭಾರತ ಸರ್ಕಾರ ಅಂಚೆಯ ಚೀಟಿ ಬಿಡುಗಡೆ. |
| ೧೪.೦೫.೨೦೦೬ | ಮಲಯಾಳಂ ಸಾಹಿತ್ಯ ಕೊಡುಗೆಗಳನ್ನು ಪರಿಗಣಿಸಿ ಕೇರಳ ಸರ್ಕಾರ ತ್ರಿಚೂರ್ |

| | |
|---|---|
| | ಸಾಹಿತ್ಯ ಅಕಾಡೆಮಿ ಸಭಾಂಗಣದಲ್ಲಿ ಕುರ್ಯಾಕೋಸ್ ಏಲಿಯಾಸ್ ಚಾವರರವರ ಭಾವ ಚಿತ್ರ ಅನಾವರಣ ಮಾಡಿದರು. |
| ೧೯.೧೦.೨೦೧೪ | ಕುರುಬ ನಾಟಕಗಳನ್ನು (ಎಕ್ಲೋೇವ್‌ಗಳು) ಕೇರಳ ಸಾಹಿತ್ಯ ಆಕಾಡೆಮಿ ಪ್ರಕಾಶನ ಮಾಡಿದವು. |
| ೨೩.೧೧.೨೦೧೪ | ಸಂತರಾಗಿ ನಾಮಕರಣ ( ರೋಂ ನಲ್ಲಿ ಪ್ರಾನ್ಸಿಸ್ ಪೋಪ್ ಗುರುಗಳು) |

Department of
Evangelization and pastoral ministry
CMI St. Paul's Province, Mysuru

ಹೆಚ್ಚಿನ ಮಾತಿಗಾಗಿ ಸಂಪರ್ಕಿಸಿ
ಚಾವರ ಸೆಂಟ್ರಲ್ ಸೆಕ್ರೆಟರಿಯೇಟ್
ಚಾವರ ಹಿಲ್ಸ್, ಕಾಕ್ಕನಾಡ್,
ಕೊಚ್ಚಿ ೬೮೨೦೩೦ ಕೇರಳ, ಇಂಡಿಯಾ
ಫೋನ್ : +914842881802
www. Chavara library.in

# ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು

**ಸಭಾ ಮಕ್ಕಳನ್ನು ಕುಟುಂಬ ಜೀವನದಲ್ಲಿ ಸ್ಥಿರ ಬುನಾದಿ ಹಾಕಲು ಸಂತ ಚಾವರ ಕುರ್ಯಾಕೋಸ್ ಏಲಿಯಾಸ್ ಪಿತರು 1868 ರಲ್ಲಿ ನೀಡಿದ ರೂಪ ರೇಖೆಗಳೇ "ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು."**

ನಮ್ಮ ಊರಿನಿಂದ ಬಂದ ಒಬ್ಬ ಪೂರ್ವಪಿತನಿಂದ ಲಭಿಸುವ ಪ್ರೀತಿ ಸಾರೋಪದೇಶ ಎಂಬ ದಿಸೆಯಲ್ಲಿ ಇಂದಿನ ಕುಟುಂಬ ನವೀಕರಣ ವೇದಿಕೆಯಲ್ಲಿ ಒಬ್ಬ ಒಳ್ಳೆಯ ಪಿತನ ಅಂತಿಮ ಕಿರುನುಡಿಗಳು ಒಂದು ಮಹಾ ಶಾಸನವೇ ಆಗಿದೆ.

ಮಾರ್ ಜಾರ್ಜ ಕಾರ್ಡಿನಲ್ ಆಲಂಜೇರಿ
ಮೇಜರ್ ಆರ್ಚ್‌ಬಿಷಪ್

"ಸಂತ ಚಾವರ ಪಿತರು ಕುಟುಂಬಗಳ ಮದ್ಯಸ್ಥಿಕೆಗಾರನಾಗಿ ಕುಟುಂಬಗಳನ್ನು ನವೀಕರಿಸಲು ಸಾಧ್ಯವಗಲಿ ಎಂದು ಬಯಸುತ್ತೇನೆ ಹಾಗೂ ಇದಕ್ಕಾಗಿ ಪ್ರಾರ್ಥಿಸುತ್ತೇನೆ."

ಫಾದರ್ ಪೋಲ್ ಆಚ್ಚಾಂಡಿ ಸಿ.ಎಂ.ಐ
ಪ್ರಿಯಲ್ ಜನರಲ್

ಸ್ತ್ರೀ ಶಕ್ತಿಗೊಳಿಸುವಿಕೆಯಿಂದ ಕುಟುಂಬ ನವೀಕರಣ ಸಾಫಲ್ಯಗೊಳಿಸಿದ ಸಂತ ಚಾವರ ಪಿತರು ಒಬ್ಬ ಪ್ರಾವಾದಿಯ ಹಾಗೆ ಕುಟುಂಬಗಳಲ್ಲಿ ಅಗತ್ಯವಾಗಿ ಬೇಕಾದ ಕ್ರಮವಿಧಿಗಳ ಕುರಿತಾಗಿ ಹಾಗೂ ಮಕ್ಕಳನ್ನು ಬೆಳೆಸಬೇಕಾದರೆ ನಾವು ಪಾಲಿಸಬೇಕಾದ ಶ್ರದ್ಧೆಯ ಬಗ್ಗೆ ಚಾವರುಳ್ ಮೂಲಕ ಇಂದಿಗೂ ನಮಗೆ ಪ್ರಬೋಧನೆ ಮಾಡುತ್ತಿದ್ದಾರೆ.

ಮದರ್ ಸಿಬಿ ಸಿ.ಎಂ.ಸಿ
ಸುಪಿರಿಯರ್ ಜನರಲ್

---

Chavara central secretariat
Chavara Hills, Kakkanad, Post box 3105
Kochi 682030Kerala, India